# ಭಾರತ ಸರ್ವೋಚ್ಚ ನ್ಯಾಯಾಲಯ

**ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಅಶೋಕ್ ಭೂಷಣ್**

**ಮತ್ತು**

**ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಕೆ.ಎಂ. ಜೋಸೆಫ್**

**ಬಸಲಿಂಗಪ್ಪ –ವಿರುದ್ಧ– ಮುದಿಬಸಪ್ಪ***

**ಕ್ರಿಮಿನಲ್ ಅಪೀಲು ಸಂಖ್ಯೆ 636/2019,** ದಿನಾಂಕ: **9ನೇ ಏಪ್ರಿಲ್, 2019**

**(ಎಸ್‌ಎಲ್‌ಪಿ (ಕ್ರಿಮಿನಲ್) ಸಂಖ್ಯೆ: 8641/2018ರಿಂದ)**

## ತೀರ್ಪು

**ನ್ಯಾಯಮೂರ್ತಿ ಅಶೋಕ್ ಭೂಷಣ್**

ಈ ಅಪೀಲು, ದಿನಾಂಕ: 04.07.2018ರ ಕರ್ನಾಟಕ ಉಚ್ಚ ನ್ಯಾಯಾಲಯದ ತೀರ್ಪನ್ನು ಪ್ರಶ್ನಿಸಿ ಆರೋಪಿಯು ಸಲ್ಲಿಸಿದ ಅಪೀಲಾಗಿದ್ದು, ಸದರಿ ತೀರ್ಪಿನ ಮೂಲಕ ಆರೋಪಿಯನ್ನು ಖುಲಾಸೆಗೊಳಿಸುವುದರ ವಿರುದ್ಧ ದೂರುದಾರನು ಸಲ್ಲಿಸಿದ್ದ ಕ್ರಿಮಿನಲ್ ಅಪೀಲಿಗೆ ಅನುಮತಿ ನೀಡಲಾಗಿದೆ ಮತ್ತು ವರ್ಗಾವಣೀಯ ಲಿಖಿತಗಳ ಅಧಿನಿಯಮ, 1881ರ 138ನೇ ಪ್ರಕರಣದ ಅಡಿಯಲ್ಲಿ ಆರೋಪಿಯು ಸಿದ್ಧದೋಷಿಯಾಗಿದ್ದಾನೆ ಹಾಗೂ ಆತನು 8,00,000/– ರೂ.ಗಳ ಜುಲ್ಮಾನೆಯ ಮತ್ತು ಅದಕ್ಕೆ ತಪ್ಪಿದಲ್ಲಿ ಮೂರು ತಿಂಗಳುಗಳ ಸಾದಾ ಸೆರೆವಾಸಕ್ಕೆ ಒಳಪಡುವ ಶಿಕ್ಷೆಗೆ ಗುರಿಯಾಗಿದ್ದಾನೆ.

2. ಅಪೀಲನ್ನು ನಿರ್ಧರಿಸುವುದಕ್ಕಾಗಿ ಮೊಕದ್ದಮೆಯ ಸಂಕ್ಷಿಪ್ತ ಸಂಗತಿಗಳು ಈ ಮುಂದಿನಂತಿವೆ:–

2.1 ದೂರುದಾರನು ದಿನಾಂಕ: 12.03.2012ರಂದು ಆರೋಪಿಗೆ ನೋಟೀಸನ್ನು ನೀಡಿದ್ದಾನೆ, ಅಪೀಲುದಾರನು, ಪರ್ಯಾಪ್ತ ಹಣ ಇಲ್ಲದ್ದರಿಂದಾಗಿ 6,00,000/– ರೂ.ಗಳ ಮೊತ್ತದ ದಿನಾಂಕ: 27.02.2012ರ ಚೆಕ್‌ಅನ್ನು ನಿರಾಕರಿಸಲಾಗಿದೆ ಎಂದು ಹೇಳಿದ್ದಾನೆ. ಆ ತರುವಾಯ, ಮೊತ್ತವನ್ನು ಸಂದಾಯ ಮಾಡದೆ ಇದ್ದದ್ದರಿಂದ, ದೂರುದಾರನು ವರ್ಗಾವಣೀಯ ಲಿಖಿತಗಳ ಅಧಿನಿಯಮ, 1881ರ (ಇದರಲ್ಲಿ ಇನ್ನು ಮುಂದೆ "ಅಧಿನಿಯಮ, 1881" ಎಂದು ಉಲ್ಲೇಖಿಸಲಾಗುವುದು) 138ನೇ ಪ್ರಕರಣದ ಅಡಿಯಲ್ಲಿ ದಿನಾಂಕ: 25.04.2012ರಂದು ದೂರನ್ನು ಸಲ್ಲಿಸಿದ್ದಾನೆ.

2.2 ಆರೋಪಿಯು, ತುರ್ತು ಮತ್ತು ಕೌಟುಂಬಿಕ ಅವಶ್ಯಕತೆಯನ್ನು ಈಡೇರಿಸಿಕೊಳ್ಳಲು 6,00,000/– ರೂ.ಗಳ ಮೊತ್ತವನ್ನು ಕೈಗಡವಾಗಿ ಸಾಲ ನೀಡಲು ದೂರುದಾರನನ್ನು ಕೋರಿದ್ದನು; ದೂರುದಾರನು ಆರೋಪಿಯ ಹೆಸರಿನಲ್ಲಿ ದಿನಾಂಕ: 27.02.2012ರ ಚೆಕ್‌ಅನ್ನು ಆರೋಪಿಗೆ ನೀಡಿದನಾದರೂ, ದಿನಾಂಕ: 01.03.2012ರಂದು "ಸಾಕಷ್ಟು ಹಣವಿಲ್ಲ" ಎಂಬ ಹಿಂಬರಹದೊಂದಿಗೆ ಬ್ಯಾಂಕು ಅದನ್ನು ಹಿಂತಿರುಗಿಸಿತು ಎಂಬುದು ದೂರಿನಲ್ಲಿನ ಆರೋಪವಾಗಿದೆ.

2.3 ದಿನಾಂಕ: 13.03.2012ರಂದು ಆರೋಪಿಗೆ ಜಾರಿ ಮಾಡಿದ್ದ ದಿನಾಂಕ: 12.03.2012ರ ನೋಟೀಸನ್ನು ನೀಡಿದ ನಂತರ, ದೂರನ್ನು ಸಲ್ಲಿಸಲಾಯಿತು. ಪ್ರಾ.ಸಾ.–1 ತನ್ನ ಮುಖ್ಯ–ವಿಚಾರಣೆಯನ್ನು ಸಲ್ಲಿಸಿದ್ದಾನೆ ಮತ್ತು ಆರೋಪಿಯ ಪರವಾಗಿ ಪಾಟಿ–ಸವಾಲನ್ನು ಸಹ ಮಾಡಲಾಗಿದೆ. ದೂರಿನ ಸಮರ್ಥನೆಯಲ್ಲಿ ದೂರುದಾರನು ದಿನಾಂಕ: 27.02.2012ರ ಮೂಲ ಚೆಕ್, ದಿನಾಂಕ: 01.03.2012ರ

ಮೂಲ ಚೆಕ್ ರಿಟರ್ನ್ ಮೆಮೋ, ದಿನಾಂಕ: 12.03.2012ರ ನೋಟೀಸಿನ ಕಚೇರಿ ಪ್ರತಿ, ದಿನಾಂಕ: 12.03.2012ರ ಅಂಚೆ ಸ್ವೀಕೃತಿ, ದಿನಾಂಕ: 16.04.2012ರಂದು ಅಂಚೆ ಇಲಾಖೆಯು ನೀಡಿದ ಸ್ವೀಕೃತಿ ಪತ್ರ ಮತ್ತು ದಿನಾಂಕ: 11.04.2012ರ ಮುಖ್ಯ ಅಂಚೆ ಕಚೇರಿಗೆ ಬರೆದ ಪತ್ರ ಇವುಗಳನ್ನು ಸಲ್ಲಿಸಿದ್ದಾನೆ. ಆರೋಪಿಯು ತನ್ನ ವಾದದ ಸಮರ್ಥನೆಗೆ ನಿಶಾನೆ.ಡಿ1 – ಒ.ಎಸ್. ಸಂಖ್ಯೆ: 148/**2011**ರಲ್ಲಿನ ವಾದಪತ್ರದ ಪ್ರಮಾಣೀಕೃತ ಪ್ರತಿ, ನಿಶಾನೆ.ಡಿ2 – ಸಿ.ಸಿ. ಸಂಖ್ಯೆ: 2298/2012ರ ಮತ್ತು ನಿಶಾನೆ.ಡಿ3 ಇವುಗಳಲ್ಲಿನ ಖಾಸಗಿ ದೂರು ಸಂಖ್ಯೆ: 119/2012ರ ಪ್ರಮಾಣೀಕೃತ ಪ್ರತಿ ಹಾಗೂ ನೋಂದಾಯಿತ ಮಾರಾಟ ಒಪ್ಪಂದದ ಪ್ರಮಾಣೀಕೃತ ಪ್ರತಿಯನ್ನು ಸಲ್ಲಿಸಿದ್ದಾನೆ.

2.4 ಅಧಿವಿಚಾರಣಾ ನ್ಯಾಯಾಲಯವು ಈ ಮುಂದಿನ ಎರಡು ಪ್ರಶ್ನೆಗಳನ್ನು ರೂಪಿಸಿದೆ:–

1. ಆರೋಪಿಯು, ಕಾನೂನುಬದ್ಧವಾಗಿ ಜಾರಿಗೊಳಿಸಬಹುದಾದ ಋಣ ಅಥವಾ ಹೊಣೆಗಾರಿಕೆಯ ತೀರಿಕೆಗಾಗಿ, ದೂರುದಾರನ ಹೆಸರಿನಲ್ಲಿ ಪ್ರಗತಿ ಗ್ರಾಮೀಣ ಬ್ಯಾಂಕ್, ನಿಜಲಿಂಗಪ್ಪ ಕಾಲೋನಿ, ರಾಯಚೂರು ಇದರ 6,00,000/– ರೂ.ಗಳ ದಿನಾಂಕ: 27.02.2012ರ 839374 ಸಂಖ್ಯೆಯನ್ನು ಹೊಂದಿರುವ ಚೆಕ್‌ಅನ್ನು ನೀಡಿದ್ದಾನೆ ಮತ್ತು 'ಹಣದ ಕೊರತೆ'ಯಿಂದಾಗಿ ಅದನ್ನು ನಿರಾಕರಿಸಲಾಗಿದೆ ಹಾಗೂ ಭಾವಿತ ಕಾನೂನುಸಮ್ಮತ

ನೋಟೀಸನ್ನು ನೀಡಿದ ನಂತರ ಸಹ, ಮೇಲೆ ಹೇಳಿದ ಚೆಕ್‌ನಲ್ಲಿ ಇರುವ ಋಣವನ್ನು ಆರೋಪಿಯು ಸಂದಾಯ ಮಾಡಿರುವುದಿಲ್ಲ ಮತ್ತು ಆ ಮೂಲಕ ಆತನು ವರ್ಗಾವಣೀಯ ಲಿಖಿತಗಳ ಅಧಿನಿಯಮದ 138ನೇ ಪ್ರಕರಣದ ಅಡಿಯಲ್ಲಿ ದಂಡನೀಯ ಅಪರಾಧವನ್ನು ಎಸಗಿದ್ದಾನೆ ಎಂಬುದನ್ನು ದೂರುದಾರನು ಸಂದೇಹಾತೀತವಾಗಿ ರುಜುವಾತು ಪಡಿಸಿದ್ದಾನೆಯೇ?

2. ಆದೇಶವೇನು?

2.5 ಅಧಿವಿಚಾರಣಾ ನ್ಯಾಯಾಲಯವು ದಾಖಲೆಯಲ್ಲಿರುವ ರುಜುವಾತು ಮತ್ತು ಸಾಕ್ಷ್ಯಗಳನ್ನು ಪರಿಗಣಿಸಿದ ತರುವಾಯ, ಕಾನೂನಾತ್ಮಕವಾಗಿ ಜಾರಿಗೊಳಿಸಬಹುದಾದ ಋಣ ಅಥವಾ ಹೊಣೆಗಾರಿಕೆಯ ಇರುವಿಕೆಯ ಬಗ್ಗೆ ಸಂಶಯಗಳನ್ನು ಹುಟ್ಟಿಸುವ ಸಂಭಾವ್ಯ ಪ್ರತಿವಾದ ಮಾಡಲು ಆರೋಪಿಯು ಸಮರ್ಥನಿದ್ದರೆ, ಪ್ರಾಸಿಕ್ಯೂಷನ್ ವಿಫಲವಾಗಬಹುದು ಎಂದು ತೀರ್ಮಾನಿಸಿದೆ. ದಿನಾಂಕ: 20.02.2015ರ ತೀರ್ಪಿನ ಮೂಲಕ, ಆರೋಪಿಯನ್ನು 138ನೇ ಪ್ರಕರಣದ ಮೇರೆಗೆ ಅಪರಾಧದಿಂದ ಖುಲಾಸೆಗೊಳಿಸಲಾಗಿದೆ. ಸದರಿ ತೀರ್ಪಿನಿಂದ ಬಾಧಿತನಾದ ದೂರುದಾರನು ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 378(4)ನೇ ಪ್ರಕರಣದ ಮೇರೆಗೆ ಕ್ರಿಮಿನಲ್ ಅಪೀಲನ್ನು ಸಲ್ಲಿಸಿದ್ದಾನೆ. ಅಧಿವಿಚಾರಣಾ ನ್ಯಾಯಾಲಯದ ತೀರ್ಪನ್ನು ಉಚ್ಚ ನ್ಯಾಯಾಲಯವು ತಳ್ಳಿಹಾಕಿ, 138ನೇ ಪ್ರಕರಣದ ಅಡಿಯಲ್ಲಿನ ಅಪರಾಧಕ್ಕಾಗಿ ಆರೋಪಿಯನ್ನು ಅಪರಾಧಿ ಎಂದು

ನಿರ್ಣಯಿಸಿತು. ಉಚ್ಚ ನ್ಯಾಯಾಲಯದ ತೀರ್ಪಿನಿಂದ ಬಾಧಿತನಾದ ಆರೋಪಿಯು ಈ ಅಪೀಲಿನೊಂದಿಗೆ ಬಂದಿದ್ದಾನೆ.

3. ಅಪೀಲುದಾರರ ಪರ ಮಾನ್ಯ ನ್ಯಾಯವಾದಿಗಳಾದ ಶ್ರೀ ಎಸ್.ಎನ್. ಭಟ್ ಇವರು, 139ನೇ ಪ್ರಕರಣದ ಅಡಿಯಲ್ಲಿನ ಪೂರ್ವಭಾವನೆಯನ್ನು ಆರೋಪಿಯು ಖಂಡಿಸಿ, ಸಂಭಾವ್ಯ ಪ್ರತಿವಾದವನ್ನು ಎತ್ತಿದ್ದಾನೆ ಮತ್ತು ದಾಖಲೆಯಲ್ಲಿನ ಸಾಕ್ಷ್ಯವನ್ನು ಪರಿಗಣಿಸಿದ ತರುವಾಯ ಅಧಿವಿಚಾರಣಾ ನ್ಯಾಯಾಲಯವು ಅದನ್ನು ಒಪ್ಪಿಕೊಂಡಿದೆ; ಖುಲಾಸೆ ಆದೇಶವನ್ನು ತಳ್ಳಿಹಾಕುವಲ್ಲಿ ಉಚ್ಚ ನ್ಯಾಯಾಲಯವು ತಪ್ಪಿದೆ; ದೂರುದಾರನ ಹಣಕಾಸು ಸಾಮರ್ಥ್ಯವನ್ನು ಆರೋಪಿಯು ಪ್ರಶ್ನಿಸಿದ್ದಾನೆ ಮತ್ತು ಹಣಕಾಸು ಸಾಮರ್ಥ್ಯದ ಯಾವುದೇ ರುಜುವಾತಿಲ್ಲದೆ, ಅಧಿವಿಚಾರಣಾ ನ್ಯಾಯಾಲಯದ ತೀರ್ಪನ್ನು ಪರಿರಕ್ಷಿಸಲಾಗಿದೆ ಎಂಬುದನ್ನು ಗಮನಿಸುವಲ್ಲಿ ಉಚ್ಚ ನ್ಯಾಯಾಲಯವು ಪ್ರಮಾದವೆಸಗಿದೆ ಎಂದು ನಿವೇದಿಸಿಕೊಂಡಿದ್ದಾರೆ. ಸಂದೇಹಾತೀತವಾಗಿ ಅಪರಾಧವನ್ನು ಸಾಬೀತುಪಡಿಸುವ ಪ್ರಾಸಿಕ್ಯೂಷನ್‌ನ ಮೇಲಿನ ಭಾರೀ ಹೊಣೆಯಂತೆ, 138ನೇ ಪ್ರಕರಣದ ಅಡಿಯಲ್ಲಿ ಆರೋಪಿಯ ಮೇಲಿನ ರುಜುವಾತಿನ ಹೊಣೆಯು ಇಲ್ಲವೆಂದು ಅವರು ನಿವೇದಿಸಿಕೊಂಡಿದ್ದಾರೆ. 1977ರಲ್ಲಿ ನಿವೃತ್ತಿ ಹೊಂದಿರುವ ಮತ್ತು 8,00,000/- ರೂ.ಗಳ ತನ್ನ ನಿವೃತ್ತಿ ಪ್ರಯೋಜನಗಳನ್ನು ನಗದೀಕರಿಸಿಕೊಂಡಿರುವ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ನಿವೃತ್ತ ನೌಕರನಾಗಿ ದೂರುದಾರನಿಗೆ ಹಣಕಾಸು ಸಾಮರ್ಥ್ಯವಿಲ್ಲವೆಂದು ನಿವೇದಿಸಿಕೊಳ್ಳಲಾಗಿದೆ. ಇತರ ವ್ಯಕ್ತಿಗಳ ವಿರುದ್ಧವೂ ಸಹ ದೂರುದಾರನು 138ನೇ ಪ್ರಕರಣದ ಅಡಿಯಲ್ಲಿ ಮೊಕದ್ದಮೆಗಳನ್ನು ದಾಖಲಿಸಿದ್ದಾನೆ ಎಂದು ನಿವೇದಿಸಿಕೊಳ್ಳಲಾಗಿದೆ. ದೂರುದಾರನು ಮಾರಾಟ ಒಪ್ಪಂದಕ್ಕೆ 4,50,000/- ರೂ.ಗಳ ಮೊತ್ತವನ್ನು ಸಹ ಸಂದಾಯ ಮಾಡಿದ್ದಾನೆ; ಆರೋಪಿಯು ಬರೆದುಕೊಟ್ಟ ಮಾರಾಟ ಒಪ್ಪಂದಕ್ಕೆ ದೂರುದಾರನು ಸಹ ಸಾಕ್ಷಿದಾರನಾಗಿದ್ದಾನೆ, ಅದರಲ್ಲಿ ಆತನು 15 ಲಕ್ಷ ರೂ.ಗಳ ಮೊತ್ತವನ್ನು ಪ್ರತಿಫಲವಾಗಿ ಪಡೆದುಕೊಂಡಿದ್ದಾನೆ;

ಹೊಣೆಯನ್ನು ತೀರಿಸಲು ದಾಖಲೆಯಲ್ಲಿ ಸಾಕಷ್ಟು ಸಾಕ್ಷ್ಯಗಳಿವೆ ಮತ್ತು ಖುಲಾಸೆ ಆದೇಶವನ್ನು ತಳ್ಳಿಹಾಕುವಲ್ಲಿ ಉಚ್ಚ ನ್ಯಾಯಾಲಯವು ಪ್ರಮಾದವೆಸಗಿದೆ ಎಂದು ನಿವೇದಿಸಿಕೊಳ್ಳಲಾಗಿದೆ.

4. ಅಪೀಲುದಾರನ ಪರ ಮಾನ್ಯ ನ್ಯಾಯವಾದಿಗಳ ನಿವೇದನೆಗಳನ್ನು ಖಂಡಿಸಿ, ದೂರುದಾರನ ಪರ ಮಾನ್ಯ ನ್ಯಾಯವಾದಿಗಳು, ಚೆಕ್ ಮೇಲಿನ ಸಹಿಯನ್ನು ಆರೋಪಿಯು ಒಪ್ಪಿಕೊಂಡಿದ್ದು, ಋಣ ಅಥವಾ ಹೊಣೆಗಾರಿಕೆಯ ತೀರಿಕೆಗಾಗಿ ಚೆಕ್‌ಅನ್ನು ನೀಡಲಾಗಿದೆ ಎಂಬ ಪೂರ್ವಭಾವನೆಯನ್ನು ಸರಿಯಾಗಿಯೇ ಎತ್ತಿದ್ದಾರೆ; ಯಾವುದೇ ಸಂಭಾವ್ಯ ಪ್ರತಿವಾದವನ್ನು ಸಾಬೀತುಪಡಿಸಲು ಆರೋಪಿಯು ಶಕ್ತನಾಗಿಲ್ಲ ಮತ್ತು ಉಚ್ಚ ನ್ಯಾಯಾಲಯವು ಆರೋಪಿಯ ಅಪರಾಧವನ್ನು ಸರಿಯಾಗಿಯೇ ನಿರ್ಣಯಿಸಿದೆ; ದೂರುದಾರನು ಯಾವುದೇ ಇತರ ಆದಾಯ ಮೂಲವನ್ನು ಹೊಂದಿಲ್ಲವೆಂಬುದರ ಬಗ್ಗೆ ಆರೋಪಿಯು ಯಾವುದೇ ಪ್ರಶ್ನೆಯನ್ನು ಎತ್ತಿರುವುದಿಲ್ಲ ಎಂದು ನಿವೇದಿಸಿಕೊಂಡಿದ್ದಾರೆ. ದೂರುದಾರನ ಪರ ಮಾನ್ಯ ನ್ಯಾಯವಾದಿಗಳು, **ಕಿಶನ್ ರಾವ್ –ವಿರುದ್ಧ– ಶಂಕರಗೌಡ, (2018) 8 ಎಸ್‌ಸಿಸಿ 165** ಮೊಕದ್ದಮೆಯಲ್ಲಿ ಈ ನ್ಯಾಯಾಲಯದ ತೀರ್ಪನ್ನು ಅವಲಂಬಿಸಿದ್ದಾರೆ.

5. ನಾವು, ಪಕ್ಷಕಾರರ ಪರ ಮಾನ್ಯ ನ್ಯಾಯವಾದಿಗಳ ನಿವೇದನೆಗಳನ್ನು ಪರಿಗಣಿಸಿದ್ದೇವೆ ಮತ್ತು ದಾಖಲೆಗಳನ್ನು ಪರಿಶೀಲಿದ್ದೇವೆ.

6. ಸಂಗತಿಗಳನ್ನು ಪುನಃ ಹೇಳುವುದಾದರೆ, ದಿನಾಂಕ: 27.02.2012ರ ಚೆಕ್‌ಅನ್ನು, ದೂರುದಾರನು ನಗದೀಕರಿಸುವುದಕ್ಕಾಗಿ ಬ್ಯಾಂಕಿಗೆ ಸಲ್ಲಿಸಿದ್ದಾನೆ ಮತ್ತು ಅದನ್ನು ದಿನಾಂಕ: 01.03.2012ರಂದು ಹಿಂದಿರುಗಿಸಲಾಗಿದೆ. ಚೆಕ್ ಮೇಲಿರುವ ಸಹಿಯನ್ನು ಆರೋಪಿಯು ಅಲ್ಲಗಳೆದಿಲ್ಲ, ಆ

ಆ ಕಾರಣದಿಂದ, ಯಾವುದೇ ಋಣ ಅಥವಾ ಹೊಣೆಗಾರಿಕೆಯ ತೀರಿಕೆಗಾಗಿ ಚೆಕ್‌ಅನ್ನು ನೀಡಲಾಗಿದೆ ಎಂಬ ಪೂರ್ವಭಾವನೆಯನ್ನು ಎತ್ತಲಾಗಿದೆ. ತನ್ನ ಮೊಕದ್ದಮೆಯನ್ನು ಸಾಬೀತುಪಡಿಸಲು ದೂರುದಾರನು ತನ್ನ ಸಾಕ್ಷ್ಯವನ್ನು ನೀಡಿದ್ದಾನೆ. ಮುಖ್ಯ ವಿಚಾರಣೆಯಲ್ಲಿ ಆತನು, 6,00,000/- ರೂ.ಗಳ ಸಾಲವನ್ನು ಕೈಗಡವಾಗಿತ್ತೆಂದು ಮತ್ತು ಅದರ ತೀರಿಕೆಗಾಗಿ, ದಿನಾಂಕ: 27.02.2012ರಂದು ಆರೋಪಿಯು ಚೆಕ್‌ಅನ್ನು ನೀಡಿದ್ದಾನೆಂದು ಹೇಳಿದ್ದಾನೆ. ದೂರಿನಲ್ಲಾಗಲಿ ಅಥವಾ ಮುಖ್ಯ ವಿಚಾರಣೆಯಲ್ಲಾಗಲಿ, ಆರೋಪಿಗೆ ಸಾಲವನ್ನು ನೀಡಿದ ದಿನಾಂಕವನ್ನು ದೂರುದಾರನು ಹೇಳಿಲ್ಲ; ಆದಾಗ್ಯೂ, ತನ್ನ ಮುಖ್ಯ ವಿಚಾರಣೆಯಲ್ಲಿ, 2011ರ ನವಂಬರ್ ತಿಂಗಳಿನಲ್ಲಿ, ಆರೋಪಿಯು 6,00,000/- ರೂ.ಗಳ ಸಾಲವನ್ನು ಪಡೆದುಕೊಂಡಿದ್ದಾನೆ ಎಂದು ದೂರುದಾರನು ಹೇಳಿದ್ದಾನೆ. ಇದಲ್ಲದೆ ಪಾಟಿ-ಸವಾಲಿನಲ್ಲಿ ಆತನು, ಆರೋಪಿಯನ್ನು ಹೊರತುಪಡಿಸಿ ಯಾರೇ ಇತರ ವ್ಯಕ್ತಿಗೆ ತಾನು ಸಾಲವನ್ನು ನೀಡಿಲ್ಲವೆಂದು ಹೇಳಿದ್ದಾನೆ. ಬಾಲನಗೌಡ ಎಂಬುವವರ ವಿರುದ್ಧ ಹಣ ವಸೂಲಿ ಮಾಡುವ ಸಂಬಂಧದಲ್ಲಿ ದಾವೆಯನ್ನು ಸಲ್ಲಿಸಿರುವುದನ್ನು ಆತನು ಅಲ್ಲಗಳೆದಿದ್ದಾನೆ. ಆದಾಗ್ಯೂ, ಪ್ರಾಮಿಸರಿ ನೋಟ್‌ನ ಆಧಾರದ ಮೇಲೆ, ಮಾಸಿಕ ಶೇಕಡ 18ರ ದರದಲ್ಲಿ ಬಡ್ಡಿ ಸಹಿತ ದಾವೆಯನ್ನು ಹೂಡಿರುವುದನನ್ನು ಆತನು ಒಪ್ಪಿಕೊಂಡಿದ್ದಾನೆ. ಇದಲ್ಲದೆ ಆತನು, ಸಿಸಿ ಸಂಖ್ಯೆ: 2298/2012ನ್ನು ಹೊಂದಿರುವ ಸಿದ್ದೇಶ್ ಎಂಬಾತನ ಮೇಲೆ ವರ್ಗಾವಣೀಯ ಲಿಖಿತಗಳ ಅಧಿನಿಯಮ, 1881ರ 138ನೇ ಪ್ರಕರಣದ ಅಡಿಯಲ್ಲಿ ಕ್ರಿಮಿನಲ್ ದಾವೆಯನ್ನು ಹೂಡಿರುವುದನ್ನು ಆತನು ಒಪ್ಪಿಕೊಂಡಿದ್ದಾನೆ. ದೂರುದಾರನು, ಆರೋಪಿಗೆ 25,000/- ರೂ.ಗಳನ್ನು ಸಾಲವನ್ನು ನೀಡಿದ್ದಾನೆ ಎಂಬ ಇಂಗಿತ ವ್ಯಕ್ತಪಡಿಸಿದಾಗ, ತನ್ನಿಂದ ಆರೋಪಿಯು 25,000/- ರೂ.ಗಳನ್ನು ಸಾಲವಾಗಿ ತೆಗೆದು ಕೊಂಡಿರುವುದು ತನಗೆ ನೆನಪಿಲ್ಲವೆಂದು ಆತನು ಹೇಳಿದ್ದಾನೆ. ಆತನ ಪಾಟಿ-ಸವಾಲಿನಲ್ಲಿ ಆತನು, ಮೆ: ಲಕ್ಷ್ಮಿ ನರಸಿಂಹ ಇಂಡಸ್ಟ್ರೀಸ್ ಪರವಾಗಿ ಆರೋಪಿಯ ಹಕ್ಕುಗಳನ್ನು ಹೊಂದಿರುವ ಭೋಗ್ಯವನ್ನು ವರ್ಗಾವಣೆ ಮಾಡುವ ಒಪ್ಪಂದಕ್ಕೆ ತಾನು ಸಾಕ್ಷಿಯಾಗಿ ಸಹಿ ಮಾಡಿರುವುದನ್ನು ಒಪ್ಪಿಕೊಂಡಿದ್ದಾನೆ. ಇದಲ್ಲದೆ, ಸದರಿ

ವ್ಯವಹರಣೆಯಿಂದ ಆರೋಪಿಯು 15 ಲಕ್ಷ ರೂ.ಗಳನ್ನು ಪಡೆದಿರುವನೇ ಎಂಬ ಪ್ರಶ್ನೆಗೆ ಆತನು ತನ್ನ ನಿರ್ಲಕ್ಷ್ಯವನ್ನು ತೋರಿದ್ದಾನೆ. 25,000/– ರೂ.ಗಳ ಸಾಲವನ್ನು ಪಡೆಯುವ ಸಮಯದಲ್ಲಿ ಖಾಲಿ ಚೆಕ್‌ಅನ್ನು ನೀಡಲಾಗಿತ್ತು ಎಂಬ ಇಂಗಿತವನ್ನು ಸಹ ವ್ಯಕ್ತಪಡಿಸಲಾಯಿತು. ಸಾಲ ನೀಡಿದ ದಿನಾಂಕದಂದು 6,00,000/– ರೂ.ಗಳು ಆತನ ಬಳಿ ಇರಲಿಲ್ಲವೆಂದು ಆತನ ಪಾಟಿ–ಸವಾಲಿನಲ್ಲಿ ಸಹ ಇಂಗಿತ ವ್ಯಕ್ತಪಡಿಸಲಾಗಿತ್ತು.

7. ಈಗ, ಪ್ರತಿವಾದಿಯು ಆರೋಪಿಸಿದ ಸಂಗತಿಗಳ ಕಡೆಗೆ ನಾವು ಗಮನ ಹರಿಸುತ್ತೇವೆ. ಯಾರೇ ವ್ಯಕ್ತಿಯ ವಿರುದ್ಧ 138ನೇ ಪ್ರಕರಣದ ಅಡಿಯಲ್ಲಿ ಯಾವುದೇ ಮೊಕದ್ದಮೆಯನ್ನು ತಾನು ಹೂಡಿಲ್ಲವೆಂಬುದನ್ನು ದೂರುದಾರನು ಪಾಟಿ–ಸವಾಲಿನಲ್ಲಿ ಅಲ್ಲಗಳೆದಿದ್ದಾಗ್ಯೂ, ನಿಶಾನೆ.ಡಿ2 ಇದು, ಆರೋಪಿಯನ್ನು ಶಿಕ್ಷಿಸುವುದಕ್ಕಾಗಿ 1881ರಅಧಿನಿಯಮದ 138ನೇ ಪ್ರಕರಣದ ಅಡಿಯಲ್ಲಿ ಶ್ರೀ ಸಿದ್ಧೇಶ್ ವಿರುದ್ಧ ದೂರುದಾರನು ಸಲ್ಲಿಸಿದ ದೂರಿನ ಪ್ರಮಾಣೀಕೃತ ಪ್ರತಿಯಾಗಿದೆ. ಇದಲ್ಲದೆ, ಶ್ರೀ ಸಿದ್ದೇಶ್‌ನು ನೀಡಿರುವನೆಂದು ಆರೋಪಿಸಿರುವ ಚೆಕ್‌ನ ದಿನಾಂಕವು ಸಹ 27.02.2012 ಆಗಿತ್ತು. ನಿಶಾನೆ.ಡಿ3 ಇದು, ದಿನಾಂಕ: 07.01.2010ರ ಮಾರಾಟ ಒಪ್ಪಂದವಾಗಿದ್ದು, ಅದರ ಮೂಲಕ ದೂರುದಾರನು ಬಾಲನ ಗೌಡನಿಗೆ 4,50,000/– ರೂ.ಗಳನ್ನು ಮಾರಾಟ ಪ್ರತಿಫಲವಾಗಿ ಸಂದಾಯ ಮಾಡಿದ್ದಾನೆ. ಮೆ: ಶ್ರೀ ಲಕ್ಷ್ಮಿ ನರಸಿಂಹ ಇಂಡಸ್ಟ್ರೀಸ್‌ಗೆ ಆರೋಪಿಯು ಗೇಣಿಭೂಮಿಯ ಹಕ್ಕುಗಳನ್ನು ವರ್ಗಾಯಿಸಿದ ದಸ್ತಾವೇಜಿನಲ್ಲಿ ದೂರುದಾರನು ಸಾಕ್ಷಿದಾರನಾಗಿದ್ದು, ಭೋಗ್ಯ ಪತ್ರದಲ್ಲಿನ ಸಹಿ ತನ್ನದೆಂಬುದನ್ನು ಒಪ್ಪಿಕೊಂಡಿದ್ದಾನೆ. ತನ್ನ ಪಾಟಿ–ಸವಾಲಿನಲ್ಲಿ, ಭೋಗ್ಯದ ಹಕ್ಕುಗಳ ಅಂಥ ವರ್ಗಾವಣೆಯ ಕಾರಣದಿಂದಾಗಿ ಆರೋಪಿಯು 15 ಲಕ್ಷ ರೂ.ಗಳನ್ನು ಸ್ವೀಕರಿಸಿರುವನು ಎಂಬುದು ಆತನ ವಾದವಾಗಿದೆ. ಅಧಿವಿಚಾರಣಾ ನ್ಯಾಯಾಲಯವು

ಸಾಕ್ಷ್ಯವನ್ನು ಕ್ರಮಗೊಳಿಸಿದ ನಂತರ, 17ನೇ ಕಂಡಿಕೆಯಲ್ಲಿ ಈ ಮುಂದಿನ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದೆ:–

"17. ಪ್ರಸ್ತುತ ಮೊಕದ್ದಮೆಯಲ್ಲಿ ಇರುವ ಚೆಕ್ ಮೊತ್ತ 6,00,000/– ರೂ.ಗಳು ಮತ್ತು ದೂರುದಾರನು ನಿವೃತ್ತ ಬಸ್ ಕಂಡಕ್ಟರ್ ಆಗಿದ್ದಾನೆ ಹಾಗೂ ಆತನು 1997ನೇ ವರ್ಷದಲ್ಲಿ ಸೇವೆಯಿಂದ ನಿವೃತ್ತನಾಗಿದ್ದು, 8,00,000/– ರೂ.ಗಳ ಇಡೀ ನಿವೃತ್ತಿ ಹಣದ ಪ್ರಯೋಜನಗಳನ್ನು ಪಡೆದುಕೊಂಡಿದ್ದಾನೆ ಹಾಗೂ ಅದನ್ನು ದೂರುದಾರನ ಖಾತೆಯಲ್ಲಿ ಠೇವಣಿ ಮಾಡಿದ್ದಾನೆ ಹಾಗೂ ದೂರುದಾರನು ಅದನ್ನು ನಗದೀಕರಿಸಿಕೊಂಡಿದ್ದಾನೆ. ದೂರುದಾರನ ಪ್ರಸ್ತುತ ಆದಾಯದ ಮೂಲಕ್ಕೆ ಸಂಬಂಧಿಸಿದಂತೆ ಆತನು ಮೌನ ವಹಿಸಿದ್ದಾನೆ. ಚೆಕ್‌ನಲ್ಲಿ ನಿರ್ದಿಷ್ಟಪಡಿಸಿದ ಮೊತ್ತವನ್ನು ಸಾಲ ನೀಡುವ ಆತನ ಸ್ಥಿತಿಯನ್ನು ತೋರಿಸಲು, ಆತನು ಏನು ಕೆಲಸ ಮಾಡುತ್ತಿದ್ದನು ಮತ್ತು ಆತನ ಆದಾಯ ಮೂಲ ಏನಾಗಿತ್ತು ಎಂಬುದನ್ನು ಆತನು ಎಲ್ಲಿಯೂ ನಿರ್ದಿಷ್ಟಪಡಿಸಿರುವುದಿಲ್ಲ. ಆತನ ಆದಾಯ ಮೂಲವನ್ನು ತೋರಿಸುವ ಒಂದೇ ಒಂದು ದಸ್ತಾವೇಜು ಸಹ ಇಲ್ಲ ಅಥವಾ ಆರೋಪಿಗೆ 6,00,000/– ರೂ.ಗಳ ಅಂಥ ಭಾರಿ ಮೊತ್ತವನ್ನು ಸಾಲವಾಗಿ ಹೊಂದಿದುದಕ್ಕಾಗಿ ದೂರುದಾರನು ಯಾವುದೇ ದಸ್ತಾವೇಜನ್ನು ಬರೆದುಕೊಟ್ಟಿಲ್ಲ. ಇದಲ್ಲದೆ, ಆರೋಪಿಯು ಮೆ: ಶ್ರೀ ಲಕ್ಷ್ಮಿ ನರಸಿಂಹ ಇಂಡಸ್ಟ್ರೀಸ್‌ಗೆ ತನ್ನ ಭೋಗ್ಯದ ಹಿತಾಸಕ್ತಿಯನ್ನು ವರ್ಗಾಯಿಸುವ ಮೂಲಕ, 15,00,000/– ರೂ.ಗಳ ಮೊತ್ತವನ್ನು ಪಡೆದುಕೊಂಡಿರುವನು ಎಂಬುದು ಪ್ರಾ.ಸಾ.–1 ಈತನಿಗೆ ಆರೋಪಿಯ ಇಂಗಿತವಾಗಿತ್ತು ಹಾಗೂ ಆತನು ಸದರಿ ವ್ಯವಹರಣೆಗೆ ಸಾಕ್ಷಿದಾರನಾಗಿದ್ದನು ಎಂಬುದನ್ನು ಪ್ರಾ.ಸಾ.–1 ಸಹ ಒಪ್ಪಿಕೊಂಡಿದ್ದಾನೆ. ಮೇಲಿನ

ಸಂಗತಿಯಿಂದ, ದೂರುದಾರನು ಹೊಂದಿದ ಅದೇ ಚೆಕ್ ನಿಶಾನೆಪಿ–1 ಆಗಿದೆಯೇ ಮತ್ತು ದೂರುದಾರನ ಆದಾಯವನ್ನು ತೋರಿಸಲು 18 ಸಿ.ಸಿ. ಸಂಖ್ಯೆ: 2675–2012ಕ್ಕೆ ಆತನು ಯಾವುದೇ ದಸ್ತಾವೇಜನ್ನು ಹಾಜರುಪಡಿಸಿರುವುದಿಲ್ಲವೇ ಮತ್ತು ಆರೋಪಿಗೆ ಅಂಥ ಭಾರೀ ಮೊತ್ತವನ್ನು ಸಾಲ ನೀಡುವ ಮುಂಚೆ ಯಾವುದೇ ದಸ್ತಾವೇಜನ್ನು ದೂರುದಾರನು ಬರೆದುಕೊಟ್ಟಿರಲಿಲ್ಲವೇ ಎಂಬ ಸಂಶಯ ಉದ್ಭವಿಸುತ್ತದೆ. ಅಂಥ ಸಂದರ್ಭಗಳು, ದೂರುದಾರನು ಕ್ಲೇಮು ಮಾಡಿರುವಂತೆ, ವ್ಯವಹರಣೆಯ ಬಗ್ಗೆ ಗಂಭೀರ ಸಂಶಯವನ್ನು ಎತ್ತುತ್ತವೆ. ಆರೋಪಿಯು ಸಾಕ್ಷಿ ಕಟಕಟೆಯನ್ನು ಪ್ರವೇಶಿಸುವ ಮತ್ತು ಪೂರ್ವಭಾವನೆಯನ್ನು ಖಂಡಿಸುವ ಅಗತ್ಯವಿಲ್ಲ ಎಂಬುದನ್ನು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ಸ್ಪಷ್ಟವಾಗಿಯೇ ಸಾಬೀತುಪಡಿಸಿದೆ. ಇಡೀ ವ್ಯವಹರಣೆಯು ಸಂಶಯದಿಂದ ಕೂಡಿದೆ ಮತ್ತು ದೂರುದಾರನು ಕ್ಲೇಮು ಮಾಡಿದಂತೆ 6,00,000/– ರೂ.ಗಳ ಸಾಲದ ಮೊತ್ತವನ್ನು ನೀಡುವ ಸಂದರ್ಭಗಳು ಉದ್ಭವಿಸುವುದಿಲ್ಲ ಎಂಬುದು ನನ್ನ ಅಭಿಪ್ರಾಯವಾಗಿದೆ. ತದನುಸಾರವಾಗಿ 1ನೇ ಪರಿಶೀಲನಾಂಶವು ನಕಾರಾತ್ಮಕವಾದುದಾಗಿದೆ."

8. ಮೊಕದ್ದಮೆಯ ಸಂಗತಿಗಳನ್ನು ಮತ್ತು ದಾಖಲೆಯಲ್ಲಿನ ಸಾಕ್ಷ್ಯವನ್ನು ನಾವು ಗಮನಿಸಿದ್ದೇವೆ. ಅಧಿನಿಯಮದ 139ನೇ ಪ್ರಕರಣದ ಅಡಿಯಲ್ಲಿ ಇತ್ಯರ್ಥಗೊಳಿಸಬೇಕಾದ ಪೂರ್ವಭಾವನೆಗಳ ಸ್ವರೂಪಕ್ಕೆ ಸಂಬಂಧಿಸಿದ ಕಾನೂನಿನ ತತ್ವಗಳನ್ನು ಮತ್ತು ಆರೋಪಿಯು ಖಂಡಿಸಬಹುದಾಗಿರುವ ರೀತಿಯನ್ನು ನಾವು ಗಮನಿಸಬೇಕಾದ ಅಗತ್ಯವಿದೆ. ಈ ಅಂಶಗಳನ್ನು ಪರಿಗಣಿಸಿರುವ ಮತ್ತು ವಿವರಿಸಿರುವ, ಈ ನ್ಯಾಯಾಲಯದ ಸುಸಂಗತ ತೀರ್ಪುಗಳೆಡೆಗೆ ನಾವು ಗಮನಹರಿಸಬೇಕಾದ ಅಗತ್ಯವಿದೆ. 1881ರ ಅಧಿನಿಯಮದ XIIIನೇ ಅಧ್ಯಾಯವು "ಸಾಕ್ಷ್ಯದ ವಿಶೇಷ ನಿಯಮಗಳು" ಶೀರ್ಷಿಕೆಯನ್ನು ಒಳಗೊಂಡಿದೆ. ವರ್ಗಾವಣೀಯ

ಲಿಖಿತಗಳಿಗೆ ಸಂಬಂಧಿಸಿದಂತೆ 118ನೇ ಪ್ರಕರಣವು ಪೂರ್ವಭಾವನೆಗಳಿಗೆ ಸಂಬಂಧಿಸಿದಂತೆ ಉಪಬಂಧ ಕಲ್ಪಿಸುತ್ತದೆ. 118ನೇ ಪ್ರಕರಣವು ಈ ಮುಂದಿನಂತಿದೆ:–

"**118**. **ವರ್ಗಾವಣೀಯ ಲಿಖಿತಗಳ ಬಗ್ಗೆ ಪೂರ್ವಭಾವನೆಗಳು.–** ಅನ್ಯಥಾ ತದ್ವಿರುದ್ಧವಾದುದು ರುಜುವಾತಾಗುವವರೆಗೆ, ಕೆಳಕಂಡ ಪೂರ್ವಭಾವನೆಗಳನ್ನು ಮಾಡತಕ್ಕದ್ದು:–

(ಎ) **ಪ್ರತಿಫಲದ ವಿಷಯದಲ್ಲಿ.–** ಪ್ರತಿಯೊಂದು ವರ್ಗಾವಣೀಯ ಲಿಖಿತವನ್ನು ಪ್ರತಿಫಲಕ್ಕಾಗಿ ಬರೆಯಲಾಗಿದ್ದಿತು ಅಥವಾ ಪ್ರತಿಯೊಂದು ಲಿಖತವು, ಅದನ್ನು ಒಪ್ಪಿಕೊಂಡಾಗ, ಹಿಂಬರಹ ಮಾಡಿದಾಗ, ವರ್ಗಾವಣೆ ಮಾಡಿದಾಗ ಅಥವಾ ವರ್ಗಾಯಿಸಿದಾಗ, ಅದನ್ನು ಪ್ರತಿಫಲಕ್ಕಾಗಿ ಒಪ್ಪಿಕೊಳ್ಳಲಾಗಿದ್ದಿತು, ಹಿಂಬರಹ ಮಾಡಲಾಗಿದ್ದಿತು, ವರ್ಗಾವಣೆ ಮಾಡಲಾಗಿದ್ದಿತು ಅಥವಾ ವರ್ಗಾಯಿಸಲಾಗಿದ್ದಿತು;

**(ಬಿ)** **ದಿನಾಂಕದ ಬಗ್ಗೆ –** ದಿನಾಂಕವನ್ನು ಹೊಂದಿರುವ ಪ್ರತಿಯೊಂದು ವರ್ಗಾವಣೀಯ ಲಿಖಿತವು, ಅಂಥ ದಿನಾಂಕದಂದು ಬರೆಯಲಾಗಿದ್ದಿತು ಅಥವಾ ಧನಾದೇಶಿಸಲಾಗಿದ್ದಿತು;

XXXXXXXXXXXXXXXXXXXXXX"

9. ಗಮನ ಹರಿಸುವ ಅಗತ್ಯವಿರುವ ಮುಂದಿನ ಉಪಬಂಧವಾದ 139ನೇ ಪ್ರಕರಣವು, ಚೆಕ್‌ಧಾರಕನ ಪರವಾಗಿ ಪೂರ್ವಭಾವನೆ ಮಾಡಲು ಉಪಬಂಧ ಕಲ್ಪಿಸುತ್ತದೆ. 139ನೇ ಪ್ರಕರಣದಲ್ಲಿ ಈ ಮುಂದಿನಂತೆ ವಿಧಿಸಲಾಗಿದೆ:–

> "**139. ಧಾರಕನ ಪರವಾಗಿ ಪೂರ್ವಭಾವನೆ.–** ತದ್ವಿರುದ್ಧವಾದುದು ಸಾಬೀತಾದ ಹೊರತು, ಚೆಕ್‌ಧಾರಕನು, ಪೂರ್ಣವಾಗಿ ಅಥವಾ ಭಾಗಶವಾಗಿ ಯಾವುದೇ ಋಣ ಅಥವಾ ಹೊಣೆಗಾರಿಕೆಯ ತೀರಿಕೆಗಾಗಿ, 138ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಸ್ವರೂಪದ ಚೆಕ್‌ಅನ್ನು ಸ್ವೀಕರಿಸಿದ್ದಾನೆ ಎಂದು ಪೂರ್ವಭಾವನೆ ಮಾಡತಕ್ಕದ್ದು."

10. ದೂರುದಾರನು ಚೆಕ್ ಧಾರಕನಾಗಿರುವುದರಿಂದ ಮತ್ತು ಚೆಕ್ ಮೇಲಿರುವ ಸಹಿಯನ್ನು ಆರೋಪಿಯು ಅಲ್ಲಗಳೆದಿಲ್ಲವಾದ್ದರಿಂದ, ಚೆಕ್‌ಅನ್ನು ಯಾವುದೇ ಋಣ ಅಥವಾ ಇತರ ಹೊಣೆಗಾರಿಕೆಯ ತೀರಿಕೆಗಾಗಿ ನೀಡಲಾಗಿದೆ ಎಂಬ ಪೂರ್ವಭಾವನೆಗೆ ಬರಬೇಕಾಗುತ್ತದೆ. 139ನೇ ಪ್ರಕರಣದ ಅಡಿಯಲ್ಲಿನ ಪೂರ್ವಭಾವನೆಯು ಖಂಡಿಸಬಹುದಾದ ಪೂರ್ವಭಾವನೆಯಾಗಿದೆ. 118ನೇ ಮತ್ತು 139ನೇ ಪ್ರಕರಣಗಳನ್ನು ಪರಿಗಣಿಸಿದ ಈ ನ್ಯಾಯಾಲಯದ ತೀರ್ಪುಗಳನ್ನು ಉಲ್ಲೇಖಿಸುವ ಮೊದಲು ನಾವು, ಆರೋಪಿಯ ಮೇಲಿನ ರುಜುವಾತಿನ ಹೊಣೆಗೆ ಸಂಬಂಧಿಸಿದ, ವಿಶೇಷವಾಗಿ, ಆರೋಪಿಯ ಅಪರಾಧಕ್ಕೆ ಸಂಬಂಧಿಸಿದ ಕೆಲವು ಶಾಸನಾತ್ಮಕ ಪೂರ್ವಭಾವನೆಯನ್ನು ಮಾಡುವ ಸಂದರ್ಭದಲ್ಲಿ, ಸಾಮಾನ್ಯ ತತ್ವಗಳನ್ನು ಗಮನಿಸುವುದು ಸುಸಂಗತವಾಗಿದೆ. **ಕಾಳಿ ರಾಮ್ –ವಿರುದ್ಧ– ಹಿಮಾಚಲ ಪ್ರದೇಶ ರಾಜ್ಯ, (1973) 2 ಎಸ್‌ಸಿಸಿ 808** ಮೊಕದ್ದಮೆಯಲ್ಲಿ ಈ ನ್ಯಾಯಾಲಯದ ಮೂವರು ನ್ಯಾಯಾಧೀಶರ ಪೀಠವು ಈ ಮುಂದಿನಂತೆ ವಿಧಿಸಿದೆ:–

"23. ............................... ಕ್ರಿಮಿನಲ್ ಮೊಕದ್ದಮೆಗಳಿಗೆ ಸಂಬಂಧಿಸಿದ ನಮ್ಮ ನ್ಯಾಯಾಡಳಿತ ವ್ಯವಸ್ಥೆಯಲ್ಲಿ ಯಾವಾಗಲೂ ದೃಷ್ಟಿಯಲ್ಲಿರಿಸಿಕೊಳ್ಳಬೇಕಾದ ಒಂದು ಪ್ರಧಾನ ತತ್ವವೆಂದರೆ, ಆರೋಪಿಯು, ಆತನ ಮೇಲೆ ಹೊರಿಸಲಾಗಿರುವ ಅಪರಾಧ ಅಪರಾಧಿಯೆಂದು ತೋರಿಸಬಹುದಾದ ಸಾಕ್ಷ್ಯವನ್ನು ಹಾಜರುಪಡಿಸುವ ಮೂಲಕ ಪ್ರಾಸಿಕ್ಯೂಷನ್ ಪೂರ್ವಭಾವನೆಯನ್ನು ಖಂಡಿಸಿದ ಹೊರತು, ಆರೋಪಿಯೆಂದು ದೋಷಾರೋಪಣೆಗೊಳಗಾದ ವ್ಯಕ್ತಿಯು ಮುಗ್ಧನೆಂಬುದಾಗಿಯೇ ಪೂರ್ವಭಾವನೆ ಮಾಡಬೇಕಾಗುತ್ತದೆ. ಆರೋಪಿಯ ಅಪರಾಧವನ್ನು ಸಾಬೀತುಪಡಿಸುವ ಹೊಣೆಯು ಪ್ರಾಸಿಕ್ಯೂಷನ್‌ದಾಗಿರುತ್ತದೆ ಮತ್ತು ಅನ್ಯಥಾ ಆ ಹೊಣೆಯನ್ನು ಅದು ಸ್ವತಃ ಬಹಿರಂಗಪಡಿಸಿದ ಹೊರತು, ಆರೋಪಿಯ ಅಪರಾಧದ ನಿರ್ಣಯವನ್ನು ನ್ಯಾಯಾಲಯಗಳು ದಾಖಲಿಸಲಾಗುವುದಿಲ್ಲ. ಆರೋಪಿಯ ಅಪರಾಧಕ್ಕೆ ಸಂಬಂಧಿಸಿದಂತೆ ಶಾಸನಾತ್ಮಕ ಪೂರ್ವಭಾವನೆಗಳು ಉದ್ಭವಿಸುವ ಕೆಲವು ಮೊಕದ್ದಮೆಗಳು ಇವೆಯಾದರೂ, ಆ ಮೊಕದ್ದಮೆಗಳಲ್ಲೂ ಸಹ ಪೂರ್ವಭಾವನೆಯನ್ನು ಇತ್ಯರ್ಥ ಮಾಡುವುದಕ್ಕೆ ಮುಂಚೆ ಇರುವ ಸಂಗತಿಗಳ ಇರುವಿಕೆಯನ್ನು ಸಾಬೀತುಪಡಿಸುವ ಹೊಣೆಯು ಪ್ರಾಸಿಕ್ಯೂಷನ್ ಮೇಲಿದೆ. ಆ ಸಂಗತಿಗಳು ಇರುವುದನ್ನು ಒಮ್ಮೆ ಪ್ರಾಸಿಕ್ಯೂಷನ್ ತೋರಿಸಿದಲ್ಲಿ, ನ್ಯಾಯಾಲಯವು ಶಾಸನಾತ್ಮಕ ಪೂರ್ವಭಾವನೆಗಳನ್ನು ಎತ್ತಬಹುದು ಮತ್ತು ಅಂಥ ಸಂದರ್ಭದಲ್ಲಿ, ಪೂರ್ವಭಾವನೆಯನ್ನು ಖಂಡಿಸುವ ಕೆಲಸವು ಆರೋಪಿಯದ್ದಾಗಿರುತ್ತದೆ. ಅಂಥ ಮೊಕದ್ದಮೆಗಳಲ್ಲೂ ಸಹ, ಆರೋಪಿಯ ಮೇಲಿರುವ ಹೊಣೆಯು, ಸಾಮಾನ್ಯವಾಗಿ ಆರೋಪಿಯ ಅಪರಾಧವನ್ನು ಸಾಬೀತುಪಡಿಸುವ ಪ್ರಾಸಿಕ್ಯೂಷನ್ ಮೇಲಿರುವ ಹೊಣೆಯಷ್ಟು ಭಾರವಾಗಿರುವುದಿಲ್ಲ. ಯುಕ್ತವಾಗಿ ಸತ್ಯವಾಗಿರಬಹುದಾಗಿರುವ ಆರೋಪಿಯ

ಮುಗ್ಧತೆಗೆ ಸಂಬಂಧಿಸಿದ ದಾಖಲೆಯನ್ನು ಕುರಿತ ಕೆಲವು ಸಾಕ್ಷ್ಯವನ್ನು ತಂದರೂ, ಆಗಲೂ ಸಹ ಅದನ್ನು ಸತ್ಯವೆಂದು ಸಕಾರಾತ್ಮಕವಾಗಿ ಸಾಬೀತು ಮಾಡಲಾಗುವುದಿಲ್ಲ, ಆಗ ಆರೋಪಿಯು ಖುಲಾಸೆಗೊಳ್ಳುವುದಕ್ಕೆ ಹಕ್ಕುಳ್ಳವನಾಗುವನು."

11. **ಭಾರತ್ ಬ್ಯಾರೆಲ್ ಮತ್ತು ಡ್ರಮ್ ಮ್ಯಾನುಫ್ಯಾಕ್ಚರಿಂಗ್ ಕಂಪನಿ –ವಿರುದ್ಧ– ಅಮೀನ್ ಚಂದ್ ಪ್ಯಾರೆಲಾಲ್, (1999) 3 ಎಸ್**ಸಿಸಿ **35** ಮೊಕದ್ದಮೆಯಲ್ಲಿ, ಅಧಿನಿಯಮದ 118(ಎ) ಪ್ರಕರಣವನ್ನು ಪರಿಗಣಿಸುವ ಸಂದರ್ಭವನ್ನು ಈ ನ್ಯಾಯಾಲಯವು ಹೊಂದಿತ್ತು. ಅದರಲ್ಲಿ ಈ ನ್ಯಾಯಾಲಯವು, ಪ್ರಾಮಿಸರಿ ನೋಟ್ ಬರೆದುದನ್ನು ಒಮ್ಮೆ ಒಪ್ಪಿಕೊಂಡಲ್ಲಿ, 118(ಎ) ಪ್ರಕರಣದ ಅಡಿಯಲ್ಲಿ, ಅದನ್ನು ಪ್ರತಿಫಲದ ಮೂಲಕ ಬೆಂಬಲಿಸಲಾಗಿದೆ ಎಂಬ ಪೂರ್ವಭಾವನೆಯು ಉದ್ಭವಿಸುತ್ತದೆ ಎಂದು ತೀರ್ಪು ನೀಡಿದೆ. ಅಂಥ ಪೂರ್ವಭಾವನೆಯು ಖಂಡಿಸಬಹುದಾದುದಾಗಿರುತ್ತದೆ ಮತ್ತು ಪ್ರತಿವಾದಿಯು ಸಂಭಾವ್ಯ ಪ್ರತಿವಾದವನ್ನು ಎತ್ತುವ ಮೂಲಕ ಪ್ರತಿಫಲ ಇರಲಿಲ್ಲವೆಂಬುದನ್ನು ಸಾಬೀತುಪಡಿಸಬಹುದಾಗಿದೆ. 12ನೇ ಕಂಡಿಕೆಯಲ್ಲಿ ಈ ಮುಂದಿನಂತೆ ಹೇಳಲಾಗಿದೆ:–

"**12**. ಇದರಲ್ಲಿ ಮೇಲೆ ಟಪ್ಪಣಿ ಮಾಡಿದಂತೆ ವಿವಿಧ ತೀರ್ಪುಗಳನ್ನು ಪರಿಗಣಿಸಿದ ನಂತರ, ಉದ್ಭವಿಸುವ ಕಾನೂನಿನ ನಿಲುವೆಂದರೆ, ಪ್ರಾಮಿಸರಿ ನೋಟ್‌ಅನ್ನು ಬರೆದುಕೊಟ್ಟಿದ್ದನ್ನು ಒಮ್ಮೆ ಒಪ್ಪಿಕೊಂಡರೆ, ಅದು ಪ್ರತಿಫಲದಿಂದ ಸಮರ್ಥಿತವಾಗಿದೆ ಎಂಬ 118(ಎ) ಪ್ರಕರಣದ ಅಡಿಯಲ್ಲಿನ ಪೂರ್ವಭಾವನೆಯು ಉದ್ಭವಿಸುತ್ತದೆ. ಅಂಥ ಪೂರ್ವಭಾವನೆಯು ಖಂಡಿಸಬಹುದಾದುದಾಗಿದೆ. ಪ್ರತಿವಾದಿಯು, ಸಂಭಾವ್ಯ ಪ್ರತಿವಾದವನ್ನು ಎತ್ತುವ ಮೂಲಕ ಪ್ರತಿಫಲ ಇಲ್ಲದಿರುವುದನ್ನು

ಸಾಬೀತುಪಡಿಸಬಹುದಾಗಿದೆ. ಪ್ರತಿಫಲದ ಇರುವಿಕೆಯು ಅಸಂಭವವಾದುದಾಗಿದೆ ಅಥವಾ ಅನುಮಾನಾಸ್ಪದವಾದುದಾಗಿದೆ ಅಥವಾ ಅದು ಕಾನೂನುಬಾಹಿರವಾದುದಾಗಿದೆ ಎಂದು ತೋರಿಸಿ ರುಜುವಾತುಪಡಿಸುವ ಪ್ರಾರಂಭಿಕ ಹೊಣೆಯನ್ನು ತೀರಿಸಿದ್ದಾನೆ ಎಂದು ಪ್ರತಿವಾದಿಯು ಸಾಬೀತುಪಡಿಸಿದರೆ, ಹೊಣೆಯು ವಾದಿಗೆ ವರ್ಗವಾಗುತ್ತದೆ ಮತ್ತು ಆತನು ಸಂಗತಿಯ ಸಾಕ್ಷ್ಯವಾಗಿ ಸಾಬೀತುಪಡಿಸಲು ಬಾಧ್ಯಸ್ಥನಾಗುತ್ತಾನೆ ಹಾಗೂ ಅದನ್ನು ಸಾಬೀತುಪಡಿಸಲು ವಿಫಲನಾದರೆ, ವರ್ಗಾವಣೀಯ ಲಿಖಿತದ ಆಧಾರದ ಮೇಲೆ ಪರಿಹಾರ ಮಂಜೂರಾತಿ ಪಡೆಯಲು ಆತನಿಗೆ ಹಕ್ಕು ಇಲ್ಲದಂತಾಗುವುದು. ಪ್ರತಿಫಲವು ಇಲ್ಲದಿರುವುದನ್ನು ಸಾಬೀತುಪಡಿಸುವ ಪ್ರತಿವಾದಿಯ ಮೇಲಿನ ಹೊಣೆಯು ನೇರವಾದುದಾಗಿರಬಹುದು ಅಥವಾ ಆತನು ಅವಲಂಬಿಸಿರುವ ಸಂದರ್ಭಗಳನ್ನು ಉಲ್ಲೇಖಿಸುವ ಮೂಲಕ ಸಂಭಾವ್ಯತೆಗಳ ಬಾಹುಳ್ಯವನ್ನು ದಾಖಲೆಯ ಮೇಲೆ ತರುವ ಮೂಲಕವಾಗಿರಬಹುದು. ಅಂಥ ಸಂದರ್ಭದಲ್ಲಿ, ವಾದಿಯ ಸಾಕ್ಷ್ಯವನ್ನೂ ಒಳಗೊಂಡು, ಮೊಕದ್ದಮೆಯಲ್ಲಿ ಒದಗಿಸಲಾದ ಎಲ್ಲಾ ಸಾಕ್ಷ್ಯವನ್ನು ಅವಲಂಬಿಸಲು ಕಾನೂನಿನ ಅಡಿಯಲ್ಲಿ ವಾದಿಯು ಹಕ್ಕುಳ್ಳವನಾಗಿರುತ್ತಾನೆ. ಪ್ರತಿಫಲ ಇಲ್ಲದಿರುವುದನ್ನು ತೋರಿಸುವ ಮೂಲಕ ಸಾಕ್ಷ್ಯದ ಪ್ರಾರಂಭಿಕ ಹೊಣೆಯನ್ನು ಈಡೇರಿಸುವಲ್ಲಿ ಪ್ರತಿವಾದಿಯು ವಿಫಲನಾದ ಸಂದರ್ಭದಲ್ಲಿ, ವಾದಿಯ ಪರವಾಗಿ 118(ಎ) ಪ್ರಕರಣದ ಅಡಿಯಲ್ಲಿ ಉದ್ಭವಿಸುವ ಪೂರ್ವಭಾವನೆಯ ಪ್ರಯೋಜನಕ್ಕೆ ಆತನು ಅಪರಿವರ್ತನೀಯವಾಗಿ ಹಕ್ಕುಳ್ಳವನಾಗಿರುವನೆಂದು ತೀರ್ಮಾನಿಸಲಾಗುವುದು. ನಕಾರಾತ್ಮಕ ಸಾಕ್ಷ್ಯದ ಇರುವಿಕೆ ಸಾಧ್ಯವಿಲ್ಲ ಅಥವಾ ಅದನ್ನು ಪರ್ಯಾಲೋಚಿಸಲಾಗುವುದಿಲ್ಲ ಮತ್ತು ಅದಕ್ಕೆ ಅವಕಾಶವಿದ್ದರೂ, ಅದನ್ನು ಅನುಮಾನದಿಂದ ನೋಡಬೇಕಾಗುತ್ತದೆ ಎಂಬುದರಿಂದಾಗಿ ನೇರ ಸಾಕ್ಷ್ಯಕ್ಕೆ ದಾರಿ

ಮಾಡಿಕೊಡುವ ಮೂಲಕ ಪ್ರತಿಫಲದ ಇರುವಿಕೆಯನ್ನು ಸಾಬೀತುಪಡಿಸದಿರುವುದಕ್ಕೆ ಪ್ರತಿವಾದಿಯ ಮೇಲೆ ನ್ಯಾಯಾಲಯವು ಒತ್ತಾಯ ಹೇರುವುದಿಲ್ಲ. ಪ್ರತಿಫಲದ ವರ್ಗಾವಣೆಯ ಅಲ್ಲಗಳೆಯುವಿಕೆ ಮಾತ್ರದಿಂದ, ಸ್ಪಷ್ಟವಾಗಿ ಯಾವುದೇ ಪ್ರತಿವಾದ ಕಂಡುಬರುವುದಿಲ್ಲ. ವಾದಿಗೆ ಸಾಬೀತುಪಡಿಸುವ ಹೊಣೆಯನ್ನು ವರ್ಗಾಯಿಸುವ ಪ್ರಯೋಜನವನ್ನು ಪಡೆದುಕೊಳ್ಳುವುದಕ್ಕಾಗಿ ಸಂಭಾವ್ಯತೆ ಇರುವ ಏನನ್ನಾದರೂ ದಾಖಲೆಯಲ್ಲಿ ತರಬೇಕಾಗುತ್ತದೆ. ಪೂರ್ವಭಾವನೆಯನ್ನು ಸಾಬೀತುಪಡಿಸದಿರಲು, ಪ್ರತಿವಾದಿಯು, ಪ್ರತಿಫಲ ಇಲ್ಲವೆಂದಾಗಲಿ ಅಥವಾ ಅದು ಇಲ್ಲದಿರುವುದು, ಒಬ್ಬ ವಿವೇಕವುಳ್ಳ ವ್ಯಕ್ತಿಯು, ಮೊಕದ್ದಮೆಯ ಯಾವುವೇ ಸಂದರ್ಭಗಳ ಅಡಿಯಲ್ಲಿ ಅದು ಇರಲಿಲ್ಲವೆಂಬ ವಾದದ ಮೇಲೆ ಕಾರ್ಯೋನ್ಮುಖವಾಗುವುದಿಲ್ಲ ಎಂಬುದು ಹಾಗೆ ಸಂಭಾವ್ಯತೆಯಾಗಿತ್ತು ಎಂದು ನ್ಯಾಯಾಲಯವು ನಂಬಬಹುದಾಗಿರುವ ಪ್ರತಿಫಲದ ಮೇಲಿನ ಸಂದರ್ಭಗಳನ್ನು ದಾಖಲೆಯಲ್ಲಿ ತರಬೇಕಾಗುತ್ತದೆ..........."

12. **ಎಮ್.ಎಸ್. ನಾರಾಯಣ ಮೆನನ್ ಅಲಿಯಾಸ್ ಮಣಿ –ವಿರುದ್ಧ– ಕೇರಳ ರಾಜ್ಯ ಮತ್ತು ಇನ್ನೊಬ್ಬರು, (2006) 6 ಎಸ್**ಸಿಸಿ **39** ಮೊಕದ್ದಮೆಯಲ್ಲಿ, ನ್ಯಾಯಮೂರ್ತಿ ಎಸ್.ಬಿ. ಸಿನ್ಹಾ ಅವರು, 1881ರ ಅಧಿನಿಯಮದ 118(ಎ), 138ನೇ ಮತ್ತು 139ನೇ ಪ್ರಕರಣಗಳನ್ನು ಪರಿಗಣಿಸಿದ್ದಾರೆ. 118(ಎ) ಮತ್ತು 139ನೇ ಈ ಎರಡೂ ಪ್ರಕರಣಗಳ ಅಡಿಯಲ್ಲಿನ ಪೂರ್ವಭಾವನೆಗಳು ಸ್ವರೂಪದಲ್ಲಿ ಖಂಡಿಸಬಹುದಾದವುಗಳಾಗಿವೆ ಎಂದು ನಿರ್ಣಯಿಸಲಾಗಿದೆ. ಈ ಹಿಂದಿನ ತೀರ್ಪನ್ನು ಉಲ್ಲೇಖಿಸಿ, "ಪೂರ್ವಭಾವನೆ ಮಾಡಬಹುದು" ಮತ್ತು "ಪೂರ್ವಭಾವನೆ ಮಾಡತಕ್ಕದ್ದು" ಎಂಬ ಪದಾವಳಿಗಳನ್ನು ವಿವರಿಸುತ್ತಾ, ಈ ಮುಂದಿನದನ್ನು ಕಂಡಿಕೆ ಸಂಖ್ಯೆ: 28ರಲ್ಲಿಯಂತೆ ನಿರ್ಣಯಿಸಲಾಗಿದೆ:–

"**28**. "ಪೂರ್ವಭಾವನೆ ಮಾಡಬಹುದು", "ಪೂರ್ವಭಾವನೆ ಮಾಡತಕ್ಕದ್ದು" ಮತ್ತು "ನಿರ್ಣಾಯಕ ಸಾಕ್ಷ್ಯ" ಎಂಬ ಪದಾವಳಿಗಳ ಪರಿಣಾಮ ಏನಾಗಿರುವುದು ಎಂಬುದನ್ನು, *ಭಾರತ ಒಕ್ಕೂಟ –ವಿರುದ್ಧ– ಪ್ರಮೋದ್ ಗುಪ್ತ, (2005) 12 ಎಸ್‌ಸಿಸಿ 1* ಮೊಕದ್ದಮೆಯಲ್ಲಿ ಈ ನ್ಯಾಯಾಲಯವು ಪರಿಗಣಿಸಿದ್ದು, ಅದು ಈ ಮುಂದಿನಂತಿದೆ: (ಎಸ್‌ಸಿಸಿ ಪಿಪಿ. 30–31, ಕಂಡಿಕೆ 52)

> "ಪಂಜಾಬ್ ಭೂ ಕಂದಾಯ ಅಧಿನಿಯಮದ 42ನೇ ಪ್ರಕರಣದಲ್ಲಿ, ಶಾಸನವು "ಪೂರ್ವಭಾವನೆ ಮಾಡತಕ್ಕದ್ದು" ಮತ್ತು "ಪೂರ್ವಭಾವನೆ ಮಾಡಬಹುದು" ಎಂಬ ಎರಡು ಬೇರೆ ಬೇರೆ ಪದಾವಳಿಗಳನ್ನು ಬಳಸಿದೆ ಎಂಬುದು ಸತ್ಯ ಮತ್ತು ಇದಲ್ಲದೆ, ಸರ್ಕಾರದಲ್ಲಿ ನಿಹಿತವಾಗಿದೆಯೆಂದು ಹೇಳಲಾದ ಗಣಿಗಳು ಮತ್ತು ಖನಿಜಗಳ ಹಕ್ಕಿಗೆ ಸಂಬಂಧಿಸಿದಂತೆ ಸಂವಾದಿಯಾಗಿ ಅದು ಇಲ್ಲದಿರುವುದಕ್ಕೆ ಭೂ–ಮಾಲೀಕರು ಉಳಿಸಿಕೊಂಡಿರುವರೆಂಬ ಪೂರ್ವಭಾವಿತ ಭೂಮಿಗಳಿಗೆ ಸಂಬಂಧಿಸಿದಂತೆ ಅಂಥ ಪೂರ್ವಭಾವನೆಯ ಖಂಡನೆಯ ಕ್ರಮ ಮತ್ತು ವಿಧಾನಕ್ಕೆ ಸಂಬಂಧಿಸಿದಂತೆ ಉಪಬಂಧ ಕಲ್ಪಿಸಲಾಗಿದೆಯಾದರೂ, "ಪೂರ್ವಭಾವನೆ ಮಾಡತಕ್ಕದ್ದು" ಎಂಬ ಪದಗಳು ನಿರ್ಣಾಯಕ ಎಂಬುದು ಅದರ ಅರ್ಥವಲ್ಲ. "ಪೂರ್ವಭಾವನೆ ಮಾಡಬಹುದು" ಮತ್ತು "ಪೂರ್ವಭಾವನೆ ಮಾಡತಕ್ಕದ್ದು" ಎಂಬ ಪದಾವಳಿಗಳ ಅರ್ಥವನ್ನು ಸಾಕ್ಷ್ಯ ಅಧಿನಿಯಮ, 1872ರ 4ನೇ ಪ್ರಕರಣದಲ್ಲಿ ವಿವರಿಸಲಾಗಿದೆ. ಅದರ

ಪರ್ಯಾಲೋಚನೆಯಿಂದ, ನ್ಯಾಯಾಲಯವು ಸಂಗತಿಯನ್ನು ಪೂರ್ವಭಾವನೆ ಮಾಡತಕ್ಕದ್ದು ಎಂದು ನಿರ್ದೇಶಿಸಿದಾಗಲೆಲ್ಲ, ಸಾಬೀತುಪಡಿಸಿದಂತೆ ಅನ್ಯಥಾ ಸಾಬೀತುಪಡಿಸದಿರುವಂತೆ ಅದನ್ನು ಪರಿಗಣಸತಕ್ಕದ್ದು ಎಂಬುದು ವಿಧಿತ. ಹಾಗಾಗಿ, ಸದರಿ ಉಪಬಂಧದ ಪರಿಭಾಷೆಯಲ್ಲಿ, "ಪೂರ್ವಭಾವನೆ ಮಾಡತಕ್ಕದ್ದು" ಎಂಬ ಪದಾವಳಿಯನ್ನು "ನಿರ್ಣಾಯಕ ಸಾಕ್ಷ್ಯ" ಪದಾವಳಿಗೆ ಸಮಾನಾರ್ಥಕವಾದುದು ಎಂಬುದಾಗಿ ನಿರ್ಣಯಿಸಲಾಗುವುದಿಲ್ಲ."

13. "ಪೂರ್ವಭಾವನೆ ಮಾಡತಕ್ಕದ್ದು" ಎಂಬ ಪದಾವಳಿಯನ್ನು ನಿರ್ಣಾಯಕ ಸಾಕ್ಷ್ಯದೊಂದಿಗೆ ಸಮಾನಾರ್ಥಕಗೊಳಿಸಬೇಕು ಎಂದು ನಿರ್ಣಯಿಸಲಾಗುವುದಿಲ್ಲ ಎಂಬುದನ್ನು ಗಮನಿಸಲಾಗಿದೆ. ಸಾಕ್ಷ್ಯ ಅಧಿನಿಯಮದ 3ನೇ ಪ್ರಕರಣದ ಅಡಿಯಲ್ಲಿ "ಸಾಬೀಪಡಿಸಿದುದು" ಮತ್ತು "ಸಾಬೀತುಪಡಿಸದಿರುವುದು" ಎಂಬ ಪದಗಳ ಪರಿಭಾಷೆಯನ್ನು ಉಲ್ಲೇಖಿಸಿ 30ನೇ ಕಂಡಿಕೆಯಲ್ಲಿ ಈ ಮುಂದಿನಂತೆ ಹೇಳಲಾಗಿದೆ:

"30. ಅಧಿನಿಯಮದ 118(ಎ) ಪ್ರಕರಣದ ಹಿಂದಿನ ತತ್ವಕ್ಕೆ "ಸಾಬೀತುಪಡಿಸಿದುದು" ಅಥವಾ "ಸಾಬೀತುಪಡಿಸದಿರುವುದು" ಎಂಬ ಸದರಿ ಪರಿಭಾಷೆಗಳನ್ನು ಅನ್ವಯಿಸಿ, ನ್ಯಾಯಾಲಯವು, ಅದರ ಮುಂದಿರುವ ಸಾಕ್ಷ್ಯವನ್ನು ಅನ್ಯಥಾ ಪರಿಗಣಿಸಿದ ನಂತರ ಮತ್ತು ಪರಿಗಣಿಸುವವರೆಗೆ ಪ್ರತಿಫಲಕ್ಕಾಗಿ ವರ್ಗಾವಣೀಯ ಲಿಖಿತವನ್ನು ಪೂರ್ವಭಾವನೆ ಮಾಡತಕ್ಕದ್ದಲ್ಲ, ನಿರ್ದಿಷ್ಟ ಮೊಕದ್ದಮೆಯ ಸಂದರ್ಭಗಳಲ್ಲಿ, ಅದು ಪ್ರತಿಫಲವಿರಲಿಲ್ಲ ಎಂದು ಅಥವಾ ಒಬ್ಬ ವಿವೇಕವುಳ್ಳ ವ್ಯಕ್ತಿಯು, ಪ್ರತಿಫಲವು ಇಲ್ಲವೆಂಬ ಊಹೆಯ ಮೇಲೆಯೇ ಕಾರ್ಯೋನ್ಮುಖನಾಗುತ್ತಾನೆ ಎಂಬ

> ಸಂಭಾವ್ಯತೆಯನ್ನು ಪರಿಗಣಿಸುವ ಇಲ್ಲದಿರುವಿಕೆಯನ್ನು ಪರಿಗಣಿಸುತ್ತದೆ ಎಂದು ನಂಬುತ್ತದೆ. ಅಂಥ ಪೂರ್ವಭಾವನೆಯನ್ನು ಖಂಡಿಸುವುದಕ್ಕಾಗಿ, ಸಂಭಾವ್ಯ ಪ್ರತಿವಾದವನ್ನು ಎತ್ತುವ ಅಗತ್ಯವಿದೆ. ಸದರಿ ಉದ್ದೇಶಕ್ಕಾಗಿ ದೂರುದಾರನ ಪರವಾಗಿ ಮಂಡಿಸಿದ ಸಾಕ್ಷ್ಯವನ್ನು ಸಹ ನಂಬಲಾಗುವುದು."

14. ಸಂಭವನೀಯ ಪ್ರತಿವಾದವನ್ನು ಎತ್ತುವ ಅಗತ್ಯವಿದೆ ಎಂದು ಈ ನ್ಯಾಯಾಲಯವು ನಿರ್ಣಯಿಸಿದೆ, ಅದಕ್ಕಾಗಿ ನೇರ ಸಾಕ್ಷ್ಯದ ಮಾರ್ಗದ ಮೂಲಕ ಪ್ರತಿಫಲದ ಇರುವಿಕೆಯನ್ನು ಸಾಬೀತುಪಡಿಸದಿರುವುದು ಆರೋಪಿಗೆ ಅಗತ್ಯವಿಲ್ಲ ಮತ್ತು ದೂರುದಾರನ ಪರವಾಗಿ ಮಂಡಿಸಿದ ಸಾಕ್ಷ್ಯವನ್ನು ಸಹ ನಂಬಬಹುದಾಗಿದೆ. ಪುರಾವೆಯ ಪ್ರಮಾಣದೊಂದಿಗೆ ವ್ಯವಹರಿಸಿ, 32ನೇ ಕಂಡಿಕೆಯಲ್ಲಿ ಈ ಮುಂದಿನಂತೆ ಅಭಿಪ್ರಾಯಪಡಲಾಗಿದೆ:–

> "32. ಪುರಾವೆಯ ಪ್ರಮಾಣವು ಸ್ಪಷ್ಟವಾಗಿ ಸಂಭಾವ್ಯತೆಗಳ ಬಾಹುಳ್ಯವಾಗಿದೆ. ಸಂಭಾವ್ಯತೆಗಳ ಬಾಹುಳ್ಯದ ಊಹೆಯನ್ನು, ದಾಖಲೆಯಲ್ಲಿನ ಸಾಕ್ಷ್ಯಗಳಿಂದ ಮಾತ್ರ ಪಡೆಯಬಹುದಾಗಿದೆಯಾದರೂ, ಆತನು ನಂಬುವ ಸಂದರ್ಭಗಳನ್ನು ಉಲ್ಲೇಖಿಸುವ ಮೂಲಕ ಸಹ ಪಡೆಯಬಹುದು."

15. **ಕೃಷ್ಣ ಜನಾರ್ಧನ ಭಟ್ –ವಿರುದ್ಧ– ದತ್ತಾತ್ರಯ ಜಿ. ಹೆಗ್ಡೆ, (2008) 4 ಎಸ್‌ಸಿಸಿ 54** ಮೊಕದ್ದಮೆಯಲ್ಲಿ, ಶಾಸನದ ಅಡಿಯಲ್ಲಿ ಆರೋಪಿಯ ಮೇಲಿರುವ ಪುರಾವೆಯ ಹೊಣೆಯನ್ನು ಈಡೇರಿಸುವುದಕ್ಕೆ ತನ್ನನ್ನು ತಾನು ಪರೀಕ್ಷಿಸುವ ಅಗತ್ಯವಿಲ್ಲ ಎಂದು ಈ ನ್ಯಾಯಾಲಯವು ನಿರ್ಣಯಿಸಿದೆ.

ಈಗಾಗಲೇ ದಾಖಲೆಯಲ್ಲಿ ತಂದ ಸಾಕ್ಷ್ಯದ ಆಧಾರದ ಮೇಲೆ ತನ್ನ ಹೊಣೆಯನ್ನು ಆತನು ಈಡೇರಿಸಬಹುದಾಗಿದೆ. 32ನೇ ಕಂಡಿಕೆಯಲ್ಲಿ ಈ ಮುಂದಿನಂತೆ ಹೇಳಲಾಗಿದೆ:–

> "32. ಶಾಸನದ ಅಡಿಯಲ್ಲಿ ಆರೋಪಿಯ ಮೇಲಿರುವ ಪುರಾವೆಯ ಹೊಣೆಯನ್ನು ಈಡೇರಿಸುವುದಕ್ಕೆ ತನ್ನನ್ನು ತಾನು ಪರೀಕ್ಷಿಸುವ ಅಗತ್ಯವಿಲ್ಲ. ಆತನು, ಈಗಾಗಲೇ ದಾಖಲೆಯಲ್ಲಿ ತಂದ ಸಾಕ್ಷ್ಯದ ಆಧಾರದ ಮೇಲೆ ತನ್ನ ಹೊಣೆಯನ್ನು ಈಡೇರಿಸಬಹುದಾಗಿದೆ. ಆರೋಪಿಯು ಮೌನ ವಹಿಸುವ ಸಾಂವಿಧಾನಿಕ ಹಕ್ಕನ್ನು ಹೊಂದಿದ್ದಾನೆ. ಕ್ರಿಮಿನಲ್ ಮೊಕದ್ದಮೆಯಲ್ಲಿ ಆರೋಪಿ ಮತ್ತು ಪ್ರಾಸಿಕ್ಯೂಷನ್ ಪರವಾಗಿನ ಪುರಾವೆಯ ಪ್ರಮಾಣ ಬೇರೆಯದಾಗಿರುತ್ತದೆ."

16. ಪ್ರಾಸಿಕ್ಯೂಷನ್ ಸಂದೇಹಾತೀತವಾಗಿ ಆರೋಪಿಯ ಅಪರಾಧವನ್ನು ಸಾಬೀತು ಪಡಿಸಬೇಕಾಗಿರುವುದರಿಂದ, ಆರೋಪಿಯ ಪರವಾಗಿ ಪ್ರತಿವಾದವನ್ನು ಸಾಬೀತುಪಡಿಸುವ ಸಲುವಾಗಿ ಪುರಾವೆಯ ಪ್ರಮಾಣವು "ಸಂಭಾವ್ಯತೆಗಳ ಬಾಹುಳ್ಯ"ವಾಗಿರುತ್ತದೆ. ಕಂಡಿಕೆ ಸಂಖ್ಯೆ 34ರಲ್ಲಿ ಈ ಮುಂದಿನಂತೆ ಹೇಳಲಾಗಿದೆ:–

> "34. ಇದಲ್ಲದೆ, ಪ್ರಾಸಿಕ್ಯೂಷನ್ ಸಂದೇಹಾತೀತವಾಗಿ ಆರೋಪಿಯ ಅಪರಾಧವನ್ನು ಸಾಬೀತುಪಡಿಸಬೇಕಾಗಿರುವುದರಿಂದ, ಆರೋಪಿಯ ಪರವಾಗಿ ಪ್ರತಿವಾದವನ್ನು ಸಾಬೀತುಪಡಿಸುವ ಸಲುವಾಗಿ ಪುರಾವೆಯ ಪ್ರಮಾಣವು "ಸಂಭಾವ್ಯತೆಗಳ ಬಾಹುಳ್ಯ"ವಾಗಿರುತ್ತದೆ. ಸಂಭಾವ್ಯತೆಗಳ ಬಾಹುಳ್ಯದ ಊಹೆಯನ್ನು, ಪಕ್ಷಕಾರರು

ದಾಖಲೆಯಲ್ಲಿ ತಂದ ಸಾಕ್ಷ್ಯಗಳಿಂದ ಮಾತ್ರವೇ ಪಡೆಯಬಹುದಾಗಿದೆಯಾದರೂ, ಆತನು ನಂಬುವ ಸಂದರ್ಭಗಳನ್ನು ಉಲ್ಲೇಖಿಸುವ ಮೂಲಕ ಸಹ ಪಡೆಯಬಹುದಾಗಿದೆ."

17. **ಕುಮಾರ್ ಎಕ್ಸ್‌ಪೋರ್ಟ್ಸ್ –ವಿರುದ್ಧ– ಶರ್ಮ ಕಾರ್ಪೆಟ್ಸ್, (2009) 2 ಎಸ್‌ಇಸಿ 513** ಮೊಕದ್ದಮೆಯಲ್ಲಿ, ವರ್ಗಾವಣೀಯ ಲಿಖಿತವನ್ನು ಬರೆದುಕೊಡಲಾಗಿತ್ತು ಎಂದು ಸಾಬೀತುಪಡಿಸುವ ಹೊಣೆಯನ್ನು ದೂರುದಾರನು ಯಾವಾಗ ಈಡೇರಿಸಬೇಕು ಮತ್ತು ಯಾವಾಗ ಹೊಣೆಯನ್ನು ವರ್ಗಾಯಿಸಬೇಕು ಎಂಬುದನ್ನು ಈ ನ್ಯಾಯಾಲಯವು ಪುನಃ ಪರೀಕ್ಷಿಸಿತು. ಸಂಖ್ಯೆ: 18ರಿಂದ 20ರವರೆಗಿನ ಕಂಡಿಕೆಗಳಲ್ಲಿ ಈ ಮುಂದಿನಂತೆ ಹೇಳಲಾಗಿದೆ:–

"18. ಅಧಿನಿಯಮದ 118ರಿಂದ 139ರವರೆಗಿನ ಪ್ರಕರಣಗಳ ಉಪಬಂಧಗಳಿಗೆ, ಸಾಕ್ಷ್ಯ ಅಧಿನಿಯಮದ 3ನೇ ಪ್ರಕರಣದಲ್ಲಿ "ಸಾಬೀತುಪಡಿಸಿದುದು" ಎಂಬ ಪದದ ಪರಿಭಾಷೆಯನ್ನು ಅನ್ವಯಿಸಿ, ಅಧಿನಿಯಮದ 138ನೇ ಪ್ರಕರಣದ ಮೇರೆಗಿನ ವಿಚಾರಣೆಯಲ್ಲಿ, ಪ್ರತಿಯೊಂದು ವರ್ಗಾವಣೀಯ ಲಿಖಿತವನ್ನು ಪ್ರತಿಫಲಕ್ಕಾಗಿ ರಚಿಸಲಾಗಿರುತ್ತದೆ ಅಥವಾ ಪಡೆಯಲಾಗಿರುತ್ತದೆ ಮತ್ತು ಒಮ್ಮೆ ವರ್ಗಾವಣೀಯ ಲಿಖಿತವನ್ನು ಬರೆಯಲಾಗಿದೆ ಎಂದು ಸಾಬೀತಪಡಿಸಿದಲ್ಲಿ ಅಥವಾ ಒಪ್ಪಿಕೊಂಡಲ್ಲಿ ಋಣ ಅಥವಾ ಹೊಣೆಗಾರಿಕೆಯ ತೀರಿಕೆಗೆ ಅದನ್ನು ಬರೆದುಕೊಡಲಾಗಿರುತ್ತದೆ ಎಂಬ ಪೂರ್ವಭಾವನೆಯನ್ನು ಮಾಡಬೇಕಾಗುತ್ತದೆ ಎಂಬುದು ಸ್ಪಷ್ಟವಾಗುತ್ತದೆ. ವರ್ಗಾವಣೀಯ ಲಿಖಿತವನ್ನು, ಆರೋಪಿಯು ಬರೆದುಕೊಟ್ಟಿರುವ ಪ್ರಾಮಿಸರಿ ನೋಟ್ ಎಂದುಕೊಂಡರೆ, ಅಧಿನಿಯಮದ 118ನೇ ಮತ್ತು 139ನೇ ಪ್ರಕರಣಗಳ ಅಡಿಯಲ್ಲಿನ ಪೂರ್ವಭಾವನೆಗಳು,

ಆರೋಪಿಯ ಮೇಲೆ ಹೊಣೆಯನ್ನು ವರ್ಗಾಯಿಸಲು ಆತನಿಗೆ ನೆರವಾಗುತ್ತವೆ. ಪೂರ್ವಭಾವನೆಗಳು ಉಳಿಯುತ್ತವೆ, ಇರುತ್ತವೆ ಮತ್ತು ಅಸ್ತಿತ್ವದಲ್ಲಿರುತ್ತವೆ ಹಾಗೂ ಚೆಕ್‌ಅನ್ನು ಪ್ರತಿಫಲಕ್ಕಾಗಿ ಮತ್ತು ಯಾವುದೇ ಋಣ ಅಥವಾ ಹೊಣೆಗಾರಿಕೆಯನ್ನು ತೀರಿಸಲು ನೀಡಿರಲಿಲ್ಲವೆಂದು ಆರೋಪಿಯು ತದ್ವಿರುದ್ಧವಾದುದನ್ನು ಸಾಬೀತುಪಡಿಸಿದಾಗ ಮಾತ್ರ ಅವು ಕೊನೆಗೊಳ್ಳುತ್ತವೆ. ಪೂರ್ವಭಾವನೆಯು ಸ್ವತಃ ಸಾಕ್ಷ್ಯವಲ್ಲ; ಆದರೆ, ಯಾವ ಪಕ್ಷಕ್ಕೆ ಅದು ಇರುವುದೋ ಆ ಪಕ್ಷಕ್ಕೆ ಮೊದಲ ನೋಟಕ್ಕೆ ಸಮ್ಮತವಾದ ಮೊಕದ್ದಮೆಯನ್ನು ಮಾತ್ರ ರಚಿಸುತ್ತದೆ.

19. ಅಧಿನಿಯಮದ 118ನೇ ಪ್ರಕರಣದಲ್ಲಿ "ತದ್ವಿರುದ್ಧವಾದುದನ್ನು ಸಾಬೀತುಪಡಿಸುವವರೆಗೆ" ಎಂಬ ಪದಾವಳಿಯ ಬಳಕೆಯು ಹಾಗೂ ಸಾಕ್ಷ್ಯ ಅಧಿನಿಯಮದ 4ನೇ ಪ್ರಕರಣದಲ್ಲಿ ನೀಡಲಾದ "ಪೂರ್ವಭಾವನೆ ಮಾಡಬಹುದು" ಮತ್ತು "ಪೂರ್ವಭಾವನೆ ಮಾಡತಕ್ಕದ್ದು" ಎಂಬ ಪರಿಭಾಷೆಗಳೊಂದಿಗೆ ಓದಲಾದ ಅಧಿನಿಯಮದ 139ನೇ ಪ್ರಕರಣದಲ್ಲಿನ "ತದ್ವಿರುದ್ಧವಾದುದನ್ನು ಸಾಬೀತುಪಡಿಸಿದ ಹೊರತು" ಎಂಬ ಪದಗಳ ಬಳಕೆಯು, ಎರಡೂ ಉಪಬಂಧಗಳ ಅಡಿಯಲ್ಲಿ ಎತ್ತಬೇಕಾದ ಪೂರ್ವಭಾವನೆಗಳು ಖಂಡಿಸಬಹುದಾದವುಗಳು ಎಂಬುದನ್ನು ಒಮ್ಮೆಲೆ ಸ್ಪಷ್ಟಪಡಿಸುತ್ತವೆ. ಪೂರ್ವಭಾವನೆ ಮಾಡಿದ ಸಂಗತಿಯ ಆಧಾರದ ಮೇಲೆ ಪೂರ್ವಭಾವನೆಯನ್ನು ಖಂಡಿಸಬಹುದಾಗಿದ್ದಾಗ, ಸಾಕ್ಷ್ಯದೊಂದಿಗೆ ಮುಂದೆ ಸಾಗುವ ಕರ್ತವ್ಯವು ಯಾವ ಪಕ್ಷದ ಮೇಲಿದೆಯೋ ಆ ಪಕ್ಷವು, ವಾಸ್ತವ ಸಂಗತಿಯು ಪೂರ್ವಭಾವನೆ ಮಾಡಿದಂತೆ ಇಲ್ಲವೆಂದು ತೋರಿಸಲು ಪ್ರವೃತ್ತವಾಗಿ ನ್ಯಾಯೋಚಿತವಾಗಿ ಮತ್ತು ಸೂಕ್ತವಾಗಿ ಸಾಕ್ಷ್ಯವನ್ನು

ಹಾಜರುಪಡಿಸಿದಾಗ, ಪೂರ್ವಭಾವನೆಯಾಗಿರದ ವಾಸ್ತವ ಸಂಗತಿಯನ್ನು, ಪೂರ್ವಭಾವನೆಯ ಉದ್ದೇಶವು ಕೊನೆಗೊಳಿಸುತ್ತದೆ.

20. ............................ಆರೋಪಿಯು, ಪ್ರಶ್ನೆಯಲ್ಲಿರುವ ಪ್ರಾಮಿಸರಿ ನೋಟ್ ಪ್ರತಿಫಲದ ಮೂಲಕ ಸಮರ್ಥಿತವಾಗಿಲ್ಲ ಮತ್ತು ಆತನು ತೀರಿಸಬೇಕಾದ ಯಾವುದೇ ಋಣ ಅಥವಾ ಹೊಣೆಗಾರಿಕೆ ಇಲ್ಲವೆಂದು ಸಾಬೀತುಪಡಿಸುವ ಪ್ರತ್ಯಕ್ಷ ಸಾಕ್ಷ್ಯವನ್ನು ಮಂಡಿಸಬಹುದು. ಆದಾಗ್ಯೂ, ನಕಾರಾತ್ಮಕ ಸಾಕ್ಷಿಯ ಇರುವಿಕೆಯು ಸಾಧ್ಯವಿಲ್ಲ ಅಥವಾ ಪರ್ಯಾಲೋಚಿಸಲಾಗುವುದಿಲ್ಲವಾದ್ದರಿಂದ, ಪ್ರತ್ಯಕ್ಷ ಸಾಕ್ಷ್ಯಕ್ಕೆ ದಾರಿ ಮಾಡಿಕೊಡುವ ಮೂಲಕ ಪ್ರತಿಫಲ ಮತ್ತು ಋಣ ಇಲ್ಲದಿರುವುದನ್ನು ಆರೋಪಿಯು ಸಾಬೀತುಪಡಿಸದಿರುವಂತೆ ಪ್ರತಿಯೊಂದು ಮೊಕದ್ದಮೆಯಲ್ಲಿ ನ್ಯಾಯಾಲಯವು ಒತ್ತಾಯಿಸುವ ಅಗತ್ಯವಿಲ್ಲ. ಅದೇ ಸಮಯದಲ್ಲಿ, ಪ್ರತಿಫಲವನ್ನು ವರ್ಗಾಯಿಸಿದ್ದನ್ನು ಮತ್ತು ಋಣದ ಇರುವಿಕೆಯನ್ನು ಅಲ್ಲಗಳೆದ ಮಾತ್ರಕ್ಕೆ ಅದು ಆರೋಪಿಯ ಉದ್ದೇಶವನ್ನು ಈಡೇರಿಸಿದಂತಾಗುವುದಿಲ್ಲ ಎಂಬುದನ್ನು ಸ್ಪಷ್ಟಪಡಿಸಲಾಗಿದೆ. ದೂರುದಾರನಿಗೆ ಪುರಾವೆಯ ಹೊಣೆಯನ್ನು ವರ್ಗಾಯಿಸುವುದನ್ನು ಪಡೆಯುವುದಕ್ಕಾಗಿ, ಸಂಭವನೀಯವಾದುದೇನನ್ನಾದರೂ ದಾಖಲೆಯಲ್ಲಿ ತರಬೇಕಾಗುತ್ತದೆ. ಪೂರ್ವಭಾವನೆಗಳನ್ನು ಸಾಬೀತುಪಡಿಸದಿರಲು, ಆರೋಪಿಯು, ಪ್ರತಿಫಲ ಮತ್ತು ಋಣ ಇರಲಿಲ್ಲವೆಂದು ಅಥವಾ ಅವುಗಳು ಇಲ್ಲದಿರುವುದು ಮೊಕದ್ದಮೆಯ ಸನ್ನಿವೇಶಗಳ ಅಡಿಯಲ್ಲಿ  ಒಬ್ಬ ವಿವೇಚನೆಯುಳ್ಳ ವ್ಯಕ್ತಿಯು, ಅವು ಇರಲಿಲ್ಲವೆಂಬ ವಾದದ ಮೇಲೆ ಕಾರ್ಯೋನ್ಮುಖವಾಗುತ್ತಿದ್ದನು ಎಂಬ ಸಂಭವನೀಯತೆ ಇತ್ತು

ಎಂದು ನ್ಯಾಯಾಲಯವು ನಂಬಬಹುದಾದಂಥ ಸಂಗತಿಗಳನ್ನು ಮತ್ತು ಸನ್ನಿವೇಶಗಳನ್ನು ದಾಖಲೆಯಲ್ಲಿ ತರಬೇಕು................."

18. **ರಂಗಪ್ಪ –ವಿರುದ್ಧ– ಶ್ರೀ ಮೋಹನ್, (2010) 11 ಎಸ್‌ಸಿಸಿ 441** ಮೊಕದ್ದಮೆಯಲ್ಲಿ ಈ ನ್ಯಾಯಾಲಯದ ಮೂವರು ನ್ಯಾಯಾಧೀಶರ ಪೀಠವು, 138ನೇ ಮತ್ತು 139ನೇ ಪ್ರಕರಣಗಳ ಉಪಬಂಧಗಳನ್ನು ಸವಿಸ್ತಾರವಾಗಿ ಪರಿಗಣಿಸುವ ಸಂದರ್ಭವನ್ನು ಹೊಂದಿತ್ತು. ಮೇಲಿನ ಮೊಕದ್ದಮೆಯಲ್ಲಿ, ಅಧಿವಿಚಾರಣಾ ನ್ಯಾಯಾಲಯವು, 138ನೇ ಪ್ರಕರಣದ ಅಡಿಯಲ್ಲಿ ಚೆಕ್‌ನ ನಿರಾಕರಣೆಗೆ ಸಂಬಂಧಿಸಿದ ಮೊಕದ್ದಮೆಯಲ್ಲಿ ಆರೋಪಿಯನ್ನು ಖುಲಾಸೆಗೊಳಿಸಿತ್ತು. ಉಚ್ಚ ನ್ಯಾಯಾಲಯವು, ಆರೋಪಿಯ ಅಪರಾಧವನ್ನು ನಿರ್ಣಯಿಸಿ, ಅಧಿವಿಚಾರಣಾ ನ್ಯಾಯಾಲಯದ ತೀರ್ಪನ್ನು ವಿಪರ್ಯಯಗೊಳಿಸಿತು. ಮೇಲಿನ ಮೊಕದ್ದಮೆಯಲ್ಲಿ, ಆರೋಪಿಯು ಚೆಕ್‌ನಲ್ಲಿನ ಸಹಿಯನ್ನು ತನ್ನದೆಂದು ಒಪ್ಪಿಕೊಂಡಿದ್ದನು. ಚೆಕ್‌ನಲ್ಲಿನ ಸಹಿಯ ಸಂಗತಿಯನ್ನು ಒಪ್ಪಿಕೊಂಡಲ್ಲಿ, ಕಾನೂನುಸಮ್ಮತವಾಗಿ ಜಾರಿಗೊಳಿಸಬಹುದಾದ ಋಣ ಅಥವಾ ಹೊಣೆಗಾರಿಕೆಗೆ ಚೆಕ್ ಸಂಬಂಧಿಸಿದೆ ಎಂಬ ಪೂರ್ವಭಾವನೆಯನ್ನು ಎತ್ತಬೇಕಾಗುತ್ತದೆ ಎಂದು ಈ ನ್ಯಾಯಾಲಯವು ತೀರ್ಪು ನೀಡಿತು. ಆದಾಗ್ಯೂ, ಈ ಪೂರ್ವಭಾವನೆಯು ಖಂಡಿಸುವ ಸ್ವರೂಪದ್ದಾಗಿದೆ ಮತ್ತು ಆಗ **ಸಂಭವನೀಯ ಪ್ರತಿವಾದವನ್ನು** ಎತ್ತುವ ಹೊಣೆಯು ಆರೋಪಿಯ ಮೇಲಿರುತ್ತದೆ. ಕಂಡಿಕೆ ಸಂಖ್ಯೆ: 13ರಲ್ಲಿ ಈ ಮುಂದಿನಂತೆ ಹೇಳಲಾಗಿದೆ:–

"13. ಉಚ್ಚ ನ್ಯಾಯಾಲಯವು ಅದರ ಆದೇಶದಲ್ಲಿ – ವಿಚಾರಣಾ ವ್ಯವಹರಣೆಗಳು ನಡೆಯುತ್ತಿರುವಲ್ಲಿ, ಆರೋಪಿಯು, ಪ್ರಶ್ನಿತ ಚೆಕ್‌ನಲ್ಲಿನ (ಸಂಖ್ಯೆ: 0886322, ದಿನಾಂಕ: 8–2–2001) ಸಹಿ ತನ್ನ ಸ್ವಂತ ಸಹಿ ಎಂದು ಒಪ್ಪಿಕೊಂಡಿದ್ದಾನೆ. ಒಮ್ಮೆ ಈ ಸಂಗತಿಯನ್ನು

ಒಪ್ಪಿಕೊಂಡಲ್ಲಿ, ಅಧಿನಿಯಮದ 139ನೇ ಪ್ರಕರಣವು, ಚೆಕ್ ಕಾನೂನುಸಮ್ಮತವಾಗಿ ಜಾರಿಗೊಳಿಸಬಹುದಾದ ಋಣ ಅಥವಾ ಹೊಣೆಗೆ ಸಂಬಂಧಿಸಿರುತ್ತದೆ ಎಂಬ ಪೂರ್ವಭಾವನೆಯನ್ನು ಕಡ್ಡಾಯಗೊಳಿಸುತ್ತದೆ. ಈ ಪೂರ್ವಭಾವನೆಯು ಖಂಡಿಸಬಹುದಾದ ಸ್ವರೂಪದ್ದಾಗಿದೆ ಮತ್ತು ಆಗ, ಸಂಭವನೀಯ ಪ್ರತಿವಾದವನ್ನು ಎತ್ತುವ ಹೊಣೆಯು ಆರೋಪಿಯ ಮೇಲಿರುತ್ತದೆ. ಪ್ರಸ್ತುತ ಸಂಗತಿಗಳಿಗೆ ಸಂಬಂಧಿಸಿದಂತೆ, ಆರೋಪಿಯು ಎತ್ತಿದ ಪ್ರತಿವಾದವು ಸಂಭವನೀಯವಾದುದಾಗಿಲ್ಲ ಎಂಬುದು ಉಚ್ಚ ನ್ಯಾಯಾಲಯಕ್ಕೆ ಕಂಡುಬಂದಿದೆ."

19. ಈ ನ್ಯಾಯಾಲಯದ ಇತರ ಬೇರೆ ಬೇರೆ ತೀರ್ಪುಗಳನ್ನು ಪರಾಮರ್ಶಿಸಿದ ನಂತರ, ಆ ಮೊಕದ್ದಮೆಯಲ್ಲಿ, ಈ ನ್ಯಾಯಾಲಯವು, ಅಧಿನಿಯಮದ 139ನೇ ಪ್ರಕರಣದ ಮೂಲಕ ಕಡ್ಡಾಯಗೊಳಿಸಿದ ನಿಸ್ಸಂದೇಹವಾಗಿ ಖಂಡಿಸಬಹುದಾದ ಪೂರ್ವಭಾವನೆಯ ಸ್ವರೂಪದ್ದಾಗಿರುವ, ವಾಸ್ತವವಾಗಿ ಕಾನೂನುಸಮ್ಮತವಾಗಿ ಜಾರಿಗೊಳಿಸಬಹುದಾದ ಋಣ ಅಥವಾ ಹೊಣೆಗಾರಿಕೆಯನ್ನು ಒಳಗೊಂಡಿರುವುದಿಲ್ಲ ಎಂದು ನಿರ್ಣಯಿಸಿದೆ. 26ನೇ ಕಂಡಿಕೆಯಲ್ಲಿ ಈ ಮುಂದಿನಂತೆ ಹೇಳಲಾಗಿದೆ:–

"26. ಈ ಉದ್ಧೃತ ಭಾಗಗಳ ಹಿನ್ನಲೆಯಲ್ಲಿ, ಅಧಿನಿಯಮದ 139ನೇ ಪ್ರಕರಣವು ಕಡ್ಡಾಯಗೊಳಿಸಿದ ಪೂರ್ವಭಾವನೆಯು, ಕಾನೂನುಸಮ್ಮತವಾಗಿ ಜಾರಿಗೊಳಿಸಬಹುದಾದ ಋಣ ಅಥವಾ ಹೊಣೆಗಾರಿಕೆಯನ್ನು ಒಳಗೊಂಡಿಲ್ಲವೆಂಬ ಪ್ರತಿವಾದ–ದೂರುದಾರ ಅಭಿಪ್ರಾಯವನ್ನು ನಾವು ಒಪ್ಪಿಕೊಳ್ಳುತ್ತೇವೆ. ಅಷ್ಟರಮಟ್ಟಿಗೆ, **ಕೃಷ್ಣ ಜನಾರ್ಧನ ಭಟ್ (2008) 4 ಎಸ್**ಸಿಸಿ **54** ಮೊಕದ್ದಮೆಯಲ್ಲಿನ ಪ್ರಶ್ನಿತ ಅಭಿಪ್ರಾಯಗಳು ಸರಿಯಾಗಿಲ್ಲದಿರಬಹುದು.

ಆದಾಗ್ಯೂ ಇದು, ಆ ಮೊಕದ್ದಮೆಯ ತೀರ್ಪು, ಅದರಲ್ಲಿನ ನಿರ್ದಿಷ್ಟ ಸಂಗತಿಗಳು ಮತ್ತು ಸನ್ನಿವೇಶಗಳನ್ನಾಧರಿಸಿತ್ತಾದ್ದರಿಂದ, ಅದರ ಸರಿತನದ ಬಗ್ಗೆ ಯಾವುದೇ ರೀತಿಯಲ್ಲಿ ಸಂಶಯವನ್ನು ವ್ಯಕ್ತಪಡಿಸುವುದಿಲ್ಲ. ಉದ್ಧೃತ ಭಾಗದಲ್ಲಿ ಟಿಪ್ಪಣಿ ಮಾಡಿದಂತೆ, ನಿಸ್ಸಂಶಯವಾಗಿ ಇದು, ಖಂಡಿಸಬಹುದಾದ ಪೂರ್ವಭಾವನೆಯ ಸ್ವರೂಪದಲ್ಲಿದೆ ಮತ್ತು ಇದು ಕಾನೂನುಸಮ್ಮತವಾಗಿ ಜಾರಿಗೊಳಿಸಬಹುದಾದ ಋಣ ಅಥವಾ ಹೊಣೆಗಾರಿಕೆಯ ಇರುವಿಕೆಯನ್ನು ವಿರೋಧಿಸಬಹುದಾಗಿರುವ ಪ್ರತಿವಾದವನ್ನು ಎತ್ತಲು ಆರೋಪಿಗೆ ಅವಕಾಶ ನೀಡುತ್ತದೆ. ಆದಾಗ್ಯೂ, ದೂರುದಾರನ ಪರವಾಗಿರುವ ಪ್ರಾರಂಭಿಕ ಪೂರ್ವಭಾವನೆ ಇದೆಯೆಂಬುದರಲ್ಲಿ ಯಾವುದೇ ಸಂಶಯ ಇರದಿರಬಹುದಾಗಿದೆ.

20. ವಿಷಯವನ್ನು ಮತ್ತಷ್ಟು ವಿವರಿಸುತ್ತಾ, ಈ ನ್ಯಾಯಾಲಯವು, ಅಧಿನಿಯಮದ 139ನೇ ಪ್ರಕರಣವು ವಿಪರ್ಯಯ ಹೊಣೆಯ ಉದಾಹರಣೆಯಾಗಿದೆ ಮತ್ತು ಪ್ರಮಾಣಾನುಸಾರ ಪರೀಕ್ಷೆಯು, ಪ್ರತಿವಾದಿ–ಆರೋಪಿಯ ಮೇಲಿನ ವಿಪರ್ಯಯ ಹೊಣೆಯ ಖಂಡಗಳ ರಚನೆಗೆ ಮತ್ತು ಅರ್ಥವಿವರಣೆಗೆ ಮಾರ್ಗದರ್ಶನವಾಗಬೇಕು ಹಾಗೂ ಪ್ರತಿವಾದಿ–ಆರೋಪಿಯಿಂದ, ಸೂಕ್ತವಲ್ಲದ ರೀತಿಯಲ್ಲಿ ಉನ್ನತ ಪ್ರಮಾಣದ ಪುರಾವೆಯನ್ನು ಒದಗಿಸುವುದನ್ನು ನಿರೀಕ್ಷಿಸಲಾಗದು. ಸಂಖ್ಯೆ: 27 ಮತ್ತು 28 ಈ ಕಂಡಿಕೆಗಳಲ್ಲಿ, ಈ ಮುಂದಿನಂತೆ ಹೇಳಲಾಗಿದೆ:–

"27. ಅಧಿನಿಯಮದ 139ನೇ ಪ್ರಕರಣವು, ವರ್ಗಾವಣೀಯ ಲಿಖಿತಗಳ ವಿಶ್ವಾಸಾರ್ಹತೆಯನ್ನು ಸುಧಾರಣೆಗೊಳಿಸುವ ಶಾಸನಾತ್ಮಕ ಉದ್ದೇಶದ ಮುಂದುವರಿಕೆಯಲ್ಲಿ ಒಳಗೊಂಡಿರುವಂಥ ವಿಪರ್ಯಯ ಹೊಣೆಗೆ ಸಂಬಂಧಿಸಿದ ಖಂಡದ

ಉದಾಹರಣೆಯಾಗಿದೆ. ಅಧಿನಿಯಮದ 138ನೇ ಪ್ರಕರಣವು, ಚೆಕ್‌ಅನ್ನು ನಿರಾಕರಿಸಿದ್ದಕ್ಕೆ ಸಂಬಂಧಿಸಿದಂತೆ ಪ್ರಬಲ ಆಪರಾಧಿಕ ಪರಿಹಾರವನ್ನು ನಿರ್ದಿಷ್ಟಪಡಿಸಿದರೆ, 139ನೇ ಪ್ರಕರಣದ ಅಡಿಯಲ್ಲಿನ ಖಂಡಿಸಬಹುದಾದ ಪೂರ್ವಭಾವನೆಯು, ವ್ಯಾಜ್ಯದ ಅವಧಿಯಲ್ಲಿ ಅನಗತ್ಯ ವಿಳಂಬವನ್ನು ತಡೆಯಲು ಇರುವ ಸಾಧನವಾಗಿದೆ. ಆದಾಗ್ಯೂ, ಚೆಕ್‌ನ ಹಿಂದಿರುಗಿಸುವಿಕೆಯು, ಬಹುತೇಕವಾಗಿ ಸಿವಿಲ್ ಅಕ್ರಮದ ಸ್ವರೂಪದಲ್ಲಿದ್ದು, ಅದರ ಪರಿಣಾಮವು ಸಾಮಾನ್ಯವಾಗಿ, ವಾಣಿಜ್ಯ ವ್ಯವಹರಣೆಗಳಲ್ಲಿ ತೊಡಗಿಕೊಂಡಿರುವ ಖಾಸಗಿ ಪಕ್ಷಕಾರರಿಗೆ ಸೀಮಿತವಾಗಿರುತ್ತದೆಯಾದ್ದರಿಂದ, 138ನೇ ಪ್ರಕರಣದ ಮೂಲಕ ದಂಡನೀಯವಾಗಿಸಬಹುದಾದ ಅಪರಾಧವನ್ನು, ನಿಯಂತ್ರಿಸುವ ಅಪರಾಧವನ್ನಾಗಿ ವಿವರಿಸುವುದು ಉತ್ತಮವೆನಿಸುತ್ತದೆ. ಅಂಥ ಸನ್ನಿವೇಶದಲ್ಲಿ, ಪ್ರಮಾಣಾನುಸಾರದ ಪರೀಕ್ಷೆಯು, ವಿಪರ್ಯಯ ಹೊಣೆ ಖಂಡಗಳ ರಚನೆ ಮತ್ತು ಅರ್ಥವಿವರಣೆಗೆ ಮಾರ್ಗದರ್ಶನವಾಗಬೇಕು ಹಾಗೂ ಪ್ರತಿವಾದಿ–ಆರೋಪಿಯು, ಸೂಕ್ತವಲ್ಲದ ರೀತಿಯಲ್ಲಿ ಉನ್ನತ ಪ್ರಮಾಣದ ಪುರಾವೆಯನ್ನು ಒದಗಿಸುವಂತೆ ನಿರೀಕ್ಷಿಸಲಾಗುವುದಿಲ್ಲ.

28. ಅಗತ್ಯ ಸಮರ್ಥನೆಗಳು ಇಲ್ಲದಿರುವಲ್ಲಿ, ವಿಪರ್ಯಯ ಹೊಣೆ ಖಂಡಗಳು, ಸಾಮಾನ್ಯವಾಗಿ ಸಾಕ್ಷ್ಯದ ಹೊಣೆಯನ್ನು ವಿಧಿಸುತ್ತವೆಯೇ ಹೊರತು, ಪ್ರತ್ಯಯಕಾರಿ ಹೊಣೆಗಳನ್ನಲ್ಲ. ಇದನ್ನು ಗಮನದಲ್ಲಿರಿಸಿಕೊಂಡು, 139ನೇ ಪ್ರಕರಣದ ಅಡಿಯಲ್ಲಿ ಆರೋಪಿಯು ಪೂರ್ವಭಾವನೆಯನ್ನು ಖಂಡಿಸಿದಾಗ, ಹಾಗೆ ಮಾಡುವುದಕ್ಕಾಗಿ ಪುರಾವೆಯ ಮಟ್ಟವು, "ಪೂರ್ವಭಾವನೆಗಳ ಬಾಹುಳ್ಯ"ವಾಗಿರುತ್ತದೆ. ಆದುದರಿಂದ, ಕಾನೂನುಸಮ್ಮತವಾಗಿ ಜಾರಿಗೊಳಿಸಬಹುದಾದ ಋಣ ಅಥವಾ ಹೊಣೆಗಾರಿಕೆಯ

ಇರುವಿಕೆಯ ಬಗ್ಗೆ ಸಂಶಯಗಳನ್ನು ಹುಟ್ಟಿಸುವ ಸಂಭವನೀಯ ಪ್ರತಿವಾದವನ್ನು ಎತ್ತಲು ಆರೋಪಿಯು ಸಮರ್ಥನಿದ್ದರೆ, ಪ್ರಾಸಿಕ್ಯೂಷನ್ ವಿಫಲವಾಗಬಹುದು. ಉದ್ಧೃತ ಭಾಗಗಳಲ್ಲಿ ಸ್ಪಷ್ಟಪಡಿಸಿದಂತೆ, ಆರೋಪಿಯು, ಅಂಥ ಪ್ರತಿವಾದವನ್ನು ಎತ್ತುವ ಸಲುವಾಗಿ ದೂರುದಾರನು ಸಲ್ಲಿಸಿದ ಸಾಕ್ಷ್ಯವನ್ನು ಅವಲಂಬಿಸಬಹುದು ಮತ್ತು ಕೆಲವು ಮೊಕದ್ದಮೆಗಳಲ್ಲಿ ಆರೋಪಿಯು ತನ್ನ ಸಾಕ್ಷ್ಯವನ್ನು ಮಂಡಿಸುವ ಅಗತ್ಯವಿರದಿರಬಹುದು ಎಂಬುದನ್ನು ಊಹಿಸಬಹುದಾಗಿದೆ."

21. ಈಗ ನಾವು, ದೂರುದಾರನ ಪರ ಮಾನ್ಯ ನ್ಯಾಯವಾದಿಗಳು ಅವಲಂಬಿಸಿದ ತೀರ್ಪಿನ ಕಡೆಗೆ, ಎಂದರೆ **ಕಿಶನ್ ರಾವ್ –ವಿರುದ್ಧ– ಶಂಕರಗೌಡ, (2018) 8 ಎಸ್‌ಸಿಸಿ 165** ಮೊಕದ್ದಮೆಯ ತೀರ್ಪಿನ ಕಡೆಗೆ ಗಮನ ಹರಿಸಬಹುದು. ಮೇಲಿನ ಮೊಕದ್ದಮೆಯಲ್ಲಿ ಈ ನ್ಯಾಯಾಲಯವು, ಅಧಿನಿಯಮದ 139ನೇ ಪ್ರಕರಣವನ್ನು ಪರಿಶೀಲಿಸಿದೆ. ಮೇಲಿನ ಮೊಕದ್ದಮೆಯಲ್ಲಿ, ಆರೋಪಿಯು ತೆಗೆದುಕೊಂಡಿರುವ ಏಕಮಾತ್ರ ಪ್ರತಿರಕ್ಷಣೆಯೆಂದರೆ, ಚೆಕ್‌ಅನ್ನು ಅಪೀಲುದಾರನು ಕದ್ದಿದ್ದಾನೆ ಎಂಬುದಾಗಿದೆ. ಸದರಿ ಪ್ರತಿರಕ್ಷಣೆಯನ್ನು ವಿಚಾರಣಾ ನ್ಯಾಯಾಲವು ತಳ್ಳಿಹಾಕಿದೆ. ಸಂಖ್ಯೆ: 21ರಿಂದ 23ರವರೆಗಿನ ಕಂಡಿಕೆಗಳಲ್ಲಿ, ಈ ಮುಂದಿನಂತೆ ಹೇಳಲಾಗಿದೆ:–

"21. ಪ್ರಸ್ತುತ ಮೊಕದ್ದಮೆಯಲ್ಲಿ, ಚೆಕ್ ಆರೋಪಿಯ ಸಹಿಗಳನ್ನು ಒಳಗೊಂಡಿತ್ತು ಮತ್ತು ಬ್ಯಾಂಕಿನಲ್ಲಿ ಹಾಜರುಪಡಿಸಲು ಅಪೀಲುದಾರನಿಗೆ ನೀಡಲಾಗಿತ್ತು ಎಂಬುದು ಅಧಿವಿಚಾರಣಾ ನ್ಯಾಯಾಲಯ ಹಾಗೂ ಅಪೀಲು ನ್ಯಾಯಾಲಯಗಳಿಗೆ ಮನವರಿಕೆಯಾಗಿದೆ. 139ನೇ ಪ್ರಕರಣದ ಅಡಿಯಲ್ಲಿನ ಪೂರ್ವಭಾವನೆಯನ್ನು ಸರಿಯಾಗಿಯೇ ಎತ್ತಲಾಗಿದ್ದು, ಅದನ್ನು

ಆರೋಪಿಯು ಖಂಡಿಸಿರುವುದಿಲ್ಲ. ಮೇಲೆ ಹೇಳಿದ ಪೂರ್ವಭಾವನೆಯನ್ನು ಖಂಡಿಸಲು ಆರೋಪಿಯು ಯಾವುದೇ ಸಾಕ್ಷ್ಯವನ್ನು ಒದಗಿಸಿರುವುದಿಲ್ಲ. ತನ್ನ ಮೊಕದ್ದಮೆಯನ್ನು ಸಮರ್ಥಿಸಿಕೊಳ್ಳಲು, ಆರೋಪಿಯು ಸಾಕ್ಷಿ ಕಟಕಟೆಗೆ ಸಹ ಬಂದಿರುವುದಿಲ್ಲ. ಅಪೀಲುದಾರನು ನೀಡಿದ ನೋಟೀಸಿಗೆ ಉತ್ತರವಾಗಿ, ಚೆಕ್‌ಅನ್ನು ಅಪೀಲುದಾರನು ಕದ್ದಿದ್ದಾನೆ ಎಂಬ ಪ್ರತಿರಕ್ಷಣೆಯನ್ನು ತೆಗೆದುಕೊಂಡಿದ್ದಾನೆ. ದಾಖಲೆಯಲ್ಲಿನ ಸಾಕ್ಷ್ಯವನ್ನು ಪರಿಗಣಿಸಿದ ನಂತರ ಅಧಿವಿಚಾರಣಾ ನ್ಯಾಯಾಲಯವು ಸದರಿ ಪ್ರತಿರಕ್ಷಣೆಯನ್ನು ತಳ್ಳಿಹಾಕಿದ್ದು, ಅದಕ್ಕೆ ಸಂಬಂಧಿಸಿದಂತೆ ಉಚ್ಚ ನ್ಯಾಯಾಲಯವು ಸಹ ಯಾವುದೇ ವಿರುದ್ಧ ಅಭಿಪ್ರಾಯವನ್ನು ವ್ಯಕ್ತಪಡಿಸಿರುವುದಿಲ್ಲ.

22. ಗಮನಹರಿಸಬೇಕಾದ ಅಗತ್ಯವಿರುವ ಇನ್ನೊಂದು ತೀರ್ಪೆಂದರೆ, *ರಂಗಪ್ಪ –ವಿರುದ್ಧ– ಶ್ರೀ ಮೋಹನ್ (2010) 11 ಎಸ್‌ಸಿಸಿ 441.* ಈ ನ್ಯಾಯಾಲಯದ ಮೂವರು ನ್ಯಾಯಾಧೀಶರ ಪೀಠವು, 1881ನೇ ಅಧಿನಿಯಮದ 139ನೇ ಪ್ರಕರಣದ ಅಡಿಯಲ್ಲಿ ಪೂರ್ವಭಾವನೆಯನ್ನು ಪರೀಕ್ಷಿಸುವ ಸಂದರ್ಭವನ್ನು ಹೊಂದಿತ್ತು. ಮೇಲೆ ಹೇಳಿದ ಮೊಕದ್ದಮೆಯಲ್ಲಿ ಈ ನ್ಯಾಯಾಲಯವು, ಋಣ ಅಥವಾ ಹೊಣೆಗಾರಿಕೆಯ ಇರುವಿಕೆಗೆ ಸಂಬಂಧಿಸಿದಂತೆ ಸಂಶಯವನ್ನು ಹುಟ್ಟಿಸುವ ಸಂಭವನೀಯ ಪ್ರತಿವಾದವನ್ನು ಎತ್ತಲು ಆರೋಪಿಯು ಶಕ್ತನಾಗಿದ್ದಾನೆ ಎಂದು ನಿರ್ಣಯಿಸಿದ್ದು, ಪೂರ್ವಭಾವನೆಯು ವಿಫಲವಾಗಬಹುದು. 26 ಮತ್ತು 27 ಈ ಕಂಡಿಕೆಗಳಲ್ಲಿ ಈ ಮುಂದಿನಂತೆ ಹೇಳಲಾಗಿದೆ: (ಎಸ್‌ಸಿಸಿ ಪಿಪಿ. 453–54)

"26. ಈ ಉದ್ಧೃತ ಭಾಗಗಳ ಹಿನ್ನಲೆಯಲ್ಲಿ, ಅಧಿನಿಯಮದ 139ನೇ ಪ್ರಕರಣವು ಕಡ್ಡಾಯಗೊಳಿಸಿದ ಪೂರ್ವಭಾವನೆಯು, ಕಾನೂನುಸಮ್ಮತವಾಗಿ ಜಾರಿಗೊಳಿಸಬಹುದಾದ ಋಣ ಅಥವಾ ಹೊಣೆಗಾರಿಕೆಯನ್ನು ನಿಶ್ಚಯವಾಗಿಯೂ ಒಳಗೊಂಡಿದೆ ಎಂಬ ಪ್ರತಿವಾದಿಯ ಕ್ಲೇಮಿನೊಂದಿಗೆ ನಮಗೆ ಸಮ್ಮತಿ ಇದೆ. ಅಷ್ಟರಮಟ್ಟಿಗೆ, *ಕೃಷ್ಣ ಜನಾರ್ಧನ ಭಟ್* ಮೊಕದ್ದಮೆಯಲ್ಲಿನ ಪ್ರಶ್ನಿತ ಅಭಿಪ್ರಾಯಗಳು ಸರಿಯಾಗಿಲ್ಲದಿರಬಹುದು. ಆದಾಗ್ಯೂ, ಮೊಕದ್ದಮೆಯು, ನಿರ್ದಿಷ್ಟ ಸಂಗತಿಗಳ ಮತ್ತು ಅದರಲ್ಲಿನ ಸಂದರ್ಭಗಳನ್ನಾಧರಿಸಿತ್ತಾದ್ದರಿಂದ, ಅದರಲ್ಲಿನ ತೀರ್ಪಿನ ಸರಿತನದ ಮೇಲೆ ಇದು ಯಾವ ರೀತಿಯಲ್ಲೂ ಸಂಶಯವನ್ನು ವ್ಯಕ್ತಪಡಿಸುವುದಿಲ್ಲ. ಉದ್ಧೃತ ಭಾಗಗಳಲ್ಲಿ ಗಮನಿಸಿದಂತೆ, ಇದು ನಿಸ್ಸಂಶಯವಾಗಿ ಖಂಡಿಸಬಹುದಾದ ಪೂರ್ವಭಾವನೆಗಳ ಸ್ವರೂಪದಲ್ಲಿದೆ ಮತ್ತು ಇದು ಆರೋಪಿಗೆ ಪ್ರತಿವಾದವನ್ನು ಎತ್ತಲು ಅವಕಾಶ ನೀಡುತ್ತದೆ ಮತ್ತು ಅದರಲ್ಲಿ, ಕಾನೂನುಸಮ್ಮತವಾಗಿ ಜಾರಿಗೊಳಿಸಬಹುದಾದ ಋಣ ಅಥವಾ ಹೊಣೆಗಾರಿಕೆಯ ಇರುವಿಕೆಯನ್ನು ವಿರೋಧಿಸಬಹುದಾಗಿದೆ. ಆದಾಗ್ಯೂ, ದೂರುದಾರನ ಪರವಾಗಿ ಪ್ರಾರಂಭಿಕ ಪೂರ್ವಭಾವನೆ ಇದೆ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ.

27. ಅಧಿನಿಯಮದ 139ನೇ ಪ್ರಕರಣವು, ವರ್ಗಾವಣೀಯ ಲಿಖಿತಗಳ ವಿಶ್ವಾಸಾರ್ಹತೆಯನ್ನು ಸುಧಾರಣೆಗೊಳಿಸುವ ಶಾಸನಾತ್ಮಕ ಉದ್ದೇಶದ

ಮುಂದುವರಿಕೆಯಲ್ಲಿ ಒಳಗೊಂಡಿರುವಂಥ ವಿಪರ್ಯಯ ಹೊಣೆಯ ಖಂಡಗಳ ಉದಾಹರಣೆಯಾಗಿದೆ. ಅಧಿನಿಯಮದ 138ನೇ ಪ್ರಕರಣವು, ಚೆಕ್‌ಗಳು ನಿರಾಕರಣೆಯ ಸಂಬಂಧದಲ್ಲಿ ಪ್ರಬಲ ಆಪರಾಧಿಕ ಪರಿಹಾರವನ್ನು ನಿರ್ದಿಷ್ಟಪಡಿಸಿದರೆ, 139ನೇ ಪ್ರಕರಣದ ಅಡಿಯಲ್ಲಿ ಖಂಡಿಸಬಹುದಾದ ಪೂರ್ವಭಾವನೆಯು, ವ್ಯಾಜ್ಯದ ಅವಧಿಯಲ್ಲಿನ ಅನುಚಿತ ವಿಳಂಬವನ್ನು ತಡೆಯುವ ಸಾಧನವಾಗಿದೆ. ಆದಾಗ್ಯೂ, 138ನೇ ಪ್ರಕರಣವು ದಂಡನೀಯವನ್ನಾಗಿಸಿದ ಅಪರಾಧವನ್ನು, ಚೆಕ್‌ಅನ್ನು ಹಿಂದಿರುಗಿಸುವುದು ಬಹುತೇಕವಾಗಿ ಸಿವಿಲ್ ಅಕ್ರಮದ ಸ್ವರೂಪದ್ದಾಗಿದ್ದು, ಅದರ ಪ್ರಭಾವವು, ಸಾಮಾನ್ಯವಾಗಿ ವಾಣಿಜ್ಯ ವ್ಯವಹರಣೆಗಳಲ್ಲಿ ತೊಡಗಿರುವ ಖಾಸಗಿ ಪಕ್ಷಕಾರರಿಗೆ ಸೀಮಿತವಾಗಿರುತ್ತದೆಯಾದ್ದರಿಂದ, ಅದನ್ನು ನಿಯಂತ್ರಣಾತ್ಮಕ ಅಪರಾಧವನ್ನಾಗಿ ವಿವರಿಸುವುದು ಉತ್ತಮ. ಅಂಥ ಸನ್ನಿವೇಶಗಳಲ್ಲಿ, ಪ್ರಮಾಣಾನುಸಾರ ಪರೀಕ್ಷೆಯು ಪ್ರತಿವಾದಿ–ಆರೋಪಿಯ ಮೇಲಿನ ವಿಪರ್ಯಯ ಹೊಣೆಯ ಖಂಡಗಳ ರಚನೆಗೆ ಮತ್ತು ಅರ್ಥವಿವರಣೆಗೆ ಮಾರ್ಗದರ್ಶನವಾಗಬೇಕು ಹಾಗೂ ಪ್ರತಿವಾದಿ–ಆರೋಪಿಯಿಂದ, ಸೂಕ್ತವಲ್ಲದ ರೀತಿಯಲ್ಲಿ ಉನ್ನತ ಪ್ರಮಾಣದ ಪುರಾವೆಯನ್ನು ಒದಗಿಸುವುದನ್ನು ನಿರೀಕ್ಷಿಸಲಾಗದು.

23. ಆರೋಪಿಯು ಯಾವುದೇ ಸಾಕ್ಷ್ಯವನ್ನು ಒದಗಿಸಿಲ್ಲ. ಚೆಕ್‌ಅನ್ನು ಕದಿಯಲಾಗಿತ್ತು ಎಂದು ನೋಟೀಸಿಗೆ ನೀಡಿದ ಉತ್ತರದಲ್ಲಿ ತೆಗೆದುಕೊಂಡ ಪ್ರತಿರಕ್ಷಣೆಯನ್ನು

ಎರಡು ಕೆಳ ನ್ಯಾಯಾಲಯಗಳು ನಿರಾಕರಿಸಿರುವುದನ್ನು, ಆರೋಪಿಯು ಋಣ ಅಥವಾ ಹೊಣೆಗಾರಿಕೆಯ ಇರುವಿಕೆಗೆ ಸಂಬಂಧಿಸಿದಂತೆ ನ್ಯಾಯಾಲಯದ ದೃಷ್ಟಿಯಲ್ಲಿ ಸಂಶಯವನ್ನು ಹುಟ್ಟುಹಾಕುವಲ್ಲಿ ಯಶಸ್ವಿಯಾಗಿದ್ದಾನೆಂದು ಉಚ್ಚ ನ್ಯಾಯಾಲಯವು ನಿರ್ಣಯಕ್ಕೆ ಬರುವುದಕ್ಕೆ ಯಾವುದೇ ಆಧಾರವಾಗಿರುವುದು ನಮಗೆ ಕಂಡುಬಂದಿಲ್ಲ. 139ನೇ ಪ್ರಕರಣದ ಅಡಿಯಲ್ಲಿನ ಪೂರ್ವಭಾವನೆಯನ್ನು, ಉಚ್ಚ ನ್ಯಾಯಾಲಯವು ವಿವರಿಸದ ಹೊರತು, ಸ್ವತಃ ಪ್ರಾ.ಸಾ.1 ಸಾಕ್ಷ್ಯದ ಆಧಾರದ ಮೇಲೆ ಹೇಗೆ ಖಂಡಿಸಬಹುದು."

22. ಮೇಲಿನ ಪ್ರಕರಣವು, ಆರೋಪಿಯು ಎತ್ತಿದ ಸಂಭಾವ್ಯ ಪ್ರತಿವಾದವನ್ನು ಈ ನ್ಯಾಯಾಲಯವು ಗುರುತಿಸದ ಪ್ರಕರಣವಾಗಿತ್ತು. ಅಧಿವಿಚಾರಣಾ ನ್ಯಾಯಾಲಯವು ಕಳುವಾಗಿದ್ದ ಚೆಕ್‌ಅನ್ನು ತಿರಸ್ಕರಿಸಿತ್ತು ಹಾಗೂ ಉಚ್ಚ ನ್ಯಾಯಾಲಯವು, ಯಾವುದೇ ವಿರುದ್ಧದ ಅಭಿಪ್ರಾಯವನ್ನು ವ್ಯಕ್ತಿಪಡಿಸಿರಲಿಲ್ಲ ಎಂಬುದು ಆರೋಪಿಯು ಎತ್ತಿದ್ದ ಏಕಮಾತ್ರ ಪ್ರತಿರಕ್ಷಣೆಯಾಗಿದ್ದು, ಈ ನ್ಯಾಯಾಲಯವು, ಅಪರಾಧ ನಿರ್ಣಯವನ್ನು ಪುನಃ ಸ್ಥಾಪಿಸಿ, ಉಚ್ಚ ನ್ಯಾಯಾಲಯದ ತೀರ್ಪನ್ನು ವಿಪರ್ಯಯಗೊಳಿಸಿದೆ. ತನ್ನದೇ ಆದ ಸಂಗತಿಗಳನ್ನು ಹೊಂದಿದ್ದ ಸದರಿ ತೀರ್ಪಿನ ಯಾವುದೇ ಪ್ರಯೋಜನವನ್ನು ಪ್ರತಿವಾದಿಯು ಪಡೆದುಕೊಳ್ಳಲಾಗುವುದಿಲ್ಲ.

23. ನಾವು, 118(ಎ) ಹಾಗೂ 139ನೇ ಪ್ರಕರಣಗಳಿಗೆ ಸಂಬಂಧಿಸಿದ ಮೇಲಿನ ಪ್ರಕರಣಗಳಲ್ಲಿ ಈ ನ್ಯಾಯಾಲಯವು ವಿಧಿಸಿದ ಪ್ರಮಾಣವನ್ನು ಗಮನಿಸಿದ್ದು, ಈ ನ್ಯಾಯಾಲಯವು ನಮೂದಿಸಿದ ತತ್ವಗಳನ್ನು ಈಗ ಈ ಮುಂದಿನ ರೀತಿಯಲ್ಲಿ ಸಂಕ್ಷಿಪ್ತಗೊಳಿಸಿದ್ದೇವೆ:–

*(i) ಚೆಕ್‌ಅನ್ನು ಬರೆದುಕೊಟ್ಟಿರುವುದನ್ನು ಒಮ್ಮೆ ಒಪ್ಪಿಕೊಂಡ ಮೇಲೆ, ಅಧಿನಿಯಮದ 139ನೇ ಪ್ರಕರಣವು, ಚೆಕ್‌ಅನ್ನು ಯಾವುದೇ ಋಣ ಅಥವಾ ಇತರ ಹೊಣೆಗಾರಿಕೆಗೆ ನೀಡುವುದಾಗಿದೆಯೆಂಬ ಪೂರ್ವಭಾವನೆಯನ್ನು ಕಡ್ಡಾಯಗೊಳಿಸಿದೆ.*

*(ii) 139ನೇ ಪ್ರಕರಣದ ಮೇರೆಗಿನ ಪೂರ್ವಭಾವನೆಯು ಖಂಡಿಸಬಹುದಾದ ಪೂರ್ವಭಾವನೆಯಾಗಿದೆ ಹಾಗೂ ಸಂಭವನೀಯ ಪ್ರತಿವಾದವನ್ನು ಎತ್ತುವ ಹೊಣೆಗಾರಿಕೆ ಆರೋಪಿಯ ಮೇಲಿರುತ್ತದೆ. ಪೂರ್ವಭಾವನೆಯನ್ನು ಖಂಡಿಸುವ ಪುರಾವೆಯ ಪ್ರಮಾಣ ಏನೆಂದರೆ ಸಂಭವನೀಯತೆಗಳ ಬಾಹುಳ್ಯತೆ.*

*(iii) ಪೂರ್ವಭಾವನೆಯನ್ನು ಖಂಡಿಸಲು, ಆರೋಪಿಯು ತಾನು ಒದಗಿಸುವ ಸಾಕ್ಷ್ಯವನ್ನು ಅವಲಂಬಿಸುವುದಕ್ಕೆ ಇದು ಮುಕ್ತವಾಗಿರುತ್ತದೆ ಅಥವಾ ಆರೋಪಿಯು, ಸಂಭವನೀಯ ಪ್ರತಿವಾದವನ್ನು ಎತ್ತುವ ಸಲುವಾಗಿ ದೂರುದಾರನು ಸಲ್ಲಿಸುವ ಸಾಕ್ಷ್ಯಾಧಾರಗಳನ್ನೂ ಕೂಡ ಅವಲಂಬಿಸಬಹುದು. ಸಂಭವನೀಯತೆಗಳ ಬಾಹುಳ್ಯತೆಯ ಊಹೆಯನ್ನು ಪಕ್ಷಕಾರರ ದಾಖಲೆಯಲ್ಲಿರುವ ಸಾಕ್ಷ್ಯಾಧಾರಗಳಿಂದ ಪಡೆದುಕೊಳ್ಳುವುದಲ್ಲದೆ, ಅವರು ಅವಲಂಬಿಸಿರುವ ಸನ್ನಿವೇಶಗಳ ಉಲ್ಲೇಖದಿಂದಲೂ ಪಡೆಯಬಹುದಾಗಿದೆ.*

*(iv) ಆರೋಪಿಯು, ತನ್ನ ಪ್ರತಿವಾದವನ್ನು ಸಮರ್ಥಿಸುವಲ್ಲಿ ಸಾಕ್ಷಿ ಕಟಕಟೆಯಲ್ಲಿ ಬರುವ ಅಗತ್ಯವಿರುವುದಿಲ್ಲ. 139ನೇ ಪ್ರಕರಣವು ಸಾಕ್ಷೀಯವಾದ ಹೊಣೆಗಾರಿಕೆಯನ್ನು ವಿಧಿಸಿದೆಯೇ ಹೊರತು ಮನವೊಲಿಕೆ ಹೊಣೆಗಾರಿಕೆಯನ್ನಲ್ಲ.*

*(v) ತನ್ನ ಪ್ರತಿವಾದವನ್ನು ಸಮರ್ಥಿಸಲು ಆರೋಪಿಯು ಕಟಕಟೆಗೆ ಬರುವ ಅಗತ್ಯವಿರುವುದಿಲ್ಲ.*

24. ಮೇಲೆ ಸೂಚಿಸಲಾದಂಥ ಕಾನೂನಿನ ಪೂರ್ವಭಾವಿ ಸ್ಥಾನವನ್ನು ಅನ್ವಯಿಸಿ, ಪ್ರಸ್ತುತ ಪ್ರಕರಣದ ಸಂಗತಿಗಳಲ್ಲಿ, ಚೆಕ್‌ನಲ್ಲಿರುವ ಸಹಿಯನ್ನು ಒಪ್ಪಿಕೊಳ್ಳಲಾಗಿದೆ. ಋಣ ಅಥವಾ ಹೊಣೆಗಾರಿಕೆಯನ್ನು ನೀಡುವಲ್ಲಿ ಚೆಕ್‌ಅನ್ನು ನೀಡಲಾಗಿತ್ತು ಎಂಬ 139ನೇ ಪ್ರಕರಣದ ಮೇರೆಗಿನ ಪೂರ್ವಭಾವನೆಯನ್ನು ಎತ್ತತಕ್ಕದ್ದು ಎಂಬುದು ಸ್ಪಷ್ಟವಾಗುತ್ತದೆ. ಯಾವುದೇ ಸಂಭವನೀಯ ಪ್ರತಿವಾದವನ್ನು ಆರೋಪಿಯು ಎತ್ತಿದ್ದನೇ ಎಂಬುದಕ್ಕೆ ಸಂಬಂಧಿಸಿದ ಪ್ರಶ್ನೆಯನ್ನು ನೋಡಬೇಕಾಗುತ್ತದೆ. ಪ್ರಾ.ಸಾ.1ರ ಪಾಟೀ–ಸವಾಲಿನಲ್ಲಿ, ಆರೋಪಿಯು ಪಡೆದುಕೊಂಡ 25,000/– ರೂ.ಗಳ ಸಾಲಕ್ಕೆ ಸಂಬಂಧಿಸಿದಂತೆ ಚೆಕ್‌ಅನ್ನು ನೀಡಲಾಗಿತ್ತು ಎಂಬ ನಿರ್ದಿಷ್ಟ ಪ್ರಶ್ನೆಯನ್ನು ಇಟ್ಟಾಗ, ಪ್ರಾ.ಸಾ.1 ತನಗೆ ನೆನಪಿಲ್ಲವೆಂದು ಹೇಳಿದ್ದಾನೆ. ತನ್ನ ಸಾಕ್ಷ್ಯದಲ್ಲಿ ಪ್ರಾ.ಸಾ.1 ತಾನು 1997ರಲ್ಲಿ ನಿವೃತ್ತನಾಗಿದ್ದು, ಆ ದಿನಾಂಕದಂದು ತಾನು 8 ಲಕ್ಷ ರೂ.ಗಳ ಹಣಕಾಸಿನ ಪ್ರಯೋಜನವನ್ನು ಪಡೆದುಕೊಂಡಿದ್ದು, ದೂರುದಾರನು ಅದನ್ನು ನಗದೀಕರಣ ಮಾಡಿಕೊಂಡಿರುವುದನ್ನು ಒಪ್ಪಿಕೊಂಡಿದ್ದಾನೆ. 2010ನೇ ವರ್ಷದಲ್ಲಿ ದೂರುದಾರನು, ಮಾರಾಟ ಒಪ್ಪಂದವನ್ನು ಮಾಡಿಕೊಂಡಿದ್ದು, ಇದಕ್ಕೆ ತಾನು 4,50,000/–ರೂ.ಗಳ ಮೊತ್ತವನ್ನು ಮಾರಾಟ ಪ್ರತಿಫಲದ ಸಂಬಂಧ ಬಾಲನಗೌಡನಿಗೆ ನೀಡಿದ್ದೆನೆಂದು ಸಾಕ್ಷ್ಯದಲ್ಲಿ ತಂದಿದ್ದಾನೆ. 2010ನೇ ವರ್ಷದಲ್ಲಿ 4,50,000/– ರೂ.ಗಳನ್ನು ನೀಡಿರುವುದನ್ನು ಒಪ್ಪಿಕೊಳ್ಳಲಾಗಿದೆ, ಅಷ್ಟೇ ಅಲ್ಲದೆ, ದೂರುದಾರನು ಸಲ್ಲಿಸಿದ್ದ 2012ರ ದೂರು ಸಂಖ್ಯೆ: 119ಕ್ಕೆ ಸಂಬಂಧಿಸಿದ 50,000/– ರೂ.ಗಳ ಸಾಲದ ಸಂದಾಯದ ದೂರಿನ ಪ್ರತಿಯನ್ನು ನಿಶಾನೆ.ಡಿ–2 ಎಂದು ಸಲ್ಲಿಸಲಾಗಿದ್ದು, ತನ್ನ ಆರ್ಥಿಕ ಸಾಮರ್ಥ್ಯವನ್ನು ರುಜುವಾತುಪಡಿಸುವ ಹೊಣೆಗಾರಿಕೆ ದೂರುದಾರನದ್ದಾಗಿರುತ್ತದೆ. 2010–2011ನೇ ಸಾಲಿನಲ್ಲಿ, ದೂರುದಾರನ ತನ್ನದೇ ವಾದದ ಪ್ರಕಾರ, ಅವನು

18 ಲಕ್ಷ ರೂ.ಗಳನ್ನು ಸಂದಾಯ ಮಾಡಿದ್ದಾನೆ. ತನ್ನ ಪಾಟೀ ಸವಾಲಿನ ಅವಧಿಯಲ್ಲಿ, ಆರೋಪಿಗೆ 6 ಲಕ್ಷ ರೂ.ಗಳನ್ನು ಸಂದಾಯ ಮಾಡುವ ಹಣಕಾಸಿನ ಸಾಮರ್ಥ್ಯವನ್ನು ಪ್ರಶ್ನಿಸಿದ್ದಾಗ, ದೂರುದಾರನು ತೃಪ್ತಿಕರವಾದ ಪ್ರತ್ಯುತ್ತರವನ್ನು ನೀಡಿರಲಿಲ್ಲ. ದಾಖಲೆಯ ಸಾಕ್ಷ್ಯವು, ಆರೋಪಿಯ ಪರವಾದ ಸಂಭವನೀಯ ಪ್ರತಿವಾದವಾಗಿದ್ದು, ಇದು, ದೂರುದಾರನ ಹಣಕಾಸಿನ ಸಾಮರ್ಥ್ಯ ಹಾಗೂ ಇತರ ಸಂಗತಿಗಳನ್ನು ರುಜುವಾತುಪಡಿಸುವ ಹೊಣೆಗಾರಿಕೆಯನ್ನು ಆತನಿಗೆ ವರ್ಗಾಯಿಸುತ್ತದೆ.

25. ದಾಖಲೆಯಲ್ಲಿರುವ ಮತ್ತೊಂದು ಸಾಕ್ಷ್ಯ ಎಂದರೆ, 2009ರ ಡಿಸೆಂಬರ್‌ನಲ್ಲಿ ಒಬ್ಬ ಬಾಲನ ಗೌಡ ಎಂಬುವನಿಗೆ ನೀಡಿದ 7 ಲಕ್ಷ ರೂ.ಗಳ ಸಾಲದ ವಸೂಲಿಗಾಗಿ ದೂರುದಾರನು ಸಲ್ಲಿಸಿದ ಮೂಲ ದಾವೆ ಸಂಖ್ಯೆ: 2011ರ 148ರಲ್ಲಿನ ವಾದಪತ್ರದ ಪ್ರತಿಯಾಗಿರುತ್ತದೆ. ಹೀಗಾಗಿ, ಡಿಸೆಂಬರ್ 2009ರಲ್ಲಿ, ಅವನು ಮಾರಾಟ ಒಪ್ಪಂದದಲ್ಲಿ 7 ಲಕ್ಷ ರೂ.ಗಳನ್ನು ನೀಡಿದ್ದನು. 2010ರಲ್ಲಿ, ಅವನು, ಮಾರಾಟ ಪ್ರತಿಫಲಕ್ಕೆ ಸಂಬಂಧಿಸಿದಂತೆ 4,50,000/– ರೂ.ಗಳನ್ನು ಸಂದಾಯ ಮಾಡಿದ್ದನು. ಅಷ್ಟೇ ಅಲ್ಲದೆ ಅವನು, 50,000/– ರೂ.ಗಳ ಸಾಲವನ್ನು ನೀಡಿದ್ದು, ಇದಕ್ಕಾಗಿ 2012ರಲ್ಲಿ ದೂರನ್ನು ನೀಡಲಾಗಿತ್ತು. ಅಷ್ಟೇ ಅಲ್ಲದೆ, 2011ರ ನವೆಂಬರ್‌ನಲ್ಲಿ 6 ಲಕ್ಷ ರೂ.ಗಳ ಸಾಲವನ್ನು ಸೂಚಿಸಲು ದಾಖಲೆಯಲ್ಲಿ ಸಾಕ್ಷ್ಯವಿದೆ. ಹೀಗಾಗಿ, ನವೆಂಬರ್ 2009ರಿಂದ 2011ರವರೆಗಿನ ಅವಧಿಯಲ್ಲಿ, ಆರೋಪಿಯನ್ನೂ ಒಳಗೊಂಡಂತೆ ಬೇರೆ ಬೇರೆ ವ್ಯಕ್ತಿಗಳಿಗೆ ದೂರುದಾರನು 18 ಲಕ್ಷ ರೂ.ಗಳ ಮೊತ್ತವನ್ನು ನೀಡಿದ್ದು, ಇದು, ಆರೋಪಿಯ ಪರವಾಗಿ ಪ್ರಶ್ನೆಯನ್ನು ಕೇಳಿದಾಗ, ಹಣಕಾಸಿನ ಸಾಮರ್ಥ್ಯವನ್ನು ರುಜುವಾತುಪಡಿಸುವ ಹೊಣೆಗಾರಿಕೆಯಿದ್ದು, ಆರೋಪಿಯು ರಾಜ್ಯ ಸಾರಿಗೆ ನಿಗಮದ ನಿವೃತ್ತ ನೌಕರನಾಗಿದ್ದು, 1997ರಲ್ಲಿ ನಿವೃತ್ತನಾಗಿರುತ್ತಾನೆ ಹಾಗೂ ಒಟ್ಟಾರೆ ನಿವೃತ್ತಿ ಪ್ರಯೋಜನ ಲಭಿಸಿದ್ದು, 8 ಲಕ್ಷ ರೂ.ಗಳನ್ನು ಮಾತ್ರ ನಗದೀಕರಣ ಮಾಡಲಾಗಿತ್ತು. ಉಚ್ಚ ನ್ಯಾಯಾಲಯವು, ದೂರುದಾರನು ನಿವೃತ್ತ ನೌಕರನಾಗಿದ್ದರೂ ಆರೋಪಿಯ ನಿವೃತ್ತಿ ವೇತನವು

ದೂರುದಾರನ ಬದುಕು ಸಾಗಿಸುವುದಕ್ಕೆ ಇರುವ ಏಕಮಾತ್ರ ಸಂಪನ್ಮೂಲ ಎಂದು ಸೂಚಿಸಿರಲಿಲ್ಲ ಎಂದು ಅಭಿಪ್ರಾಯಪಟ್ಟಿದೆ. ಉಚ್ಚ ನ್ಯಾಯಾಲಯದ ತೀರ್ಪಿನ 16ನೇ ಕಂಡಿಕೆಯಲ್ಲಿ ಈ ಮುಂದಿನಂತೆ ಅಭಿಪ್ರಾಯಪಡಲಾಗಿತ್ತು:

> "16. ದೂರುದಾರನು ನಿವೃತ್ತ ನೌಕರನಾಗಿದ್ದರೂ, ದೂರುದಾರನ ಜೀವನೋಪಾಯಕ್ಕೆ ಪಿಂಚಣಿಯು ಏಕಮಾತ್ರ ಸಾಧನವಾಗಿತ್ತು ಎಂಬ ಇಂಗಿತವನ್ನು ಆರೋಪಿಯು ವ್ಯಕ್ತಪಡಿಸಿರುವುದಿಲ್ಲ. ಈ ಸಂದರ್ಭಗಳ ಹಿನ್ನಲೆಯಲ್ಲಿ, ದೂರುದಾರನು ಸಾಲ ನೀಡುವ ಸಾಮರ್ಥ್ಯದ ತನ್ನ ಪ್ರಾರಂಭಿಕ ಹೊಣೆಯನ್ನು ಸಾಬೀತುಪಡಿಸಿರುವುದಿಲ್ಲ ಎಂಬ ಅಧಿವಿಚಾರಣಾ ನ್ಯಾಯಾಲಯದ ನಿರ್ಣಯವು ವ್ಯತಿರಿಕ್ತವಾದುದಾಗಿದೆ."

26. ಈ ವಸ್ತುವಿಷಯವನ್ನು ಮತ್ತೊಂದು ದೃಷ್ಟಿಕೋನದಿಂದ ಅಗತ್ಯವಾಗಿ ಗಮನಿಸಬೇಕಾಗಿದೆ. ದೂರುದಾರನು ದೂರನ್ನು ದಾಖಲಿಸಿರುವನು. ಅದರಂತೆ ಮುಖ್ಯ ವಿಚಾರಣೆಯಲ್ಲಿ ದೂರಿನಲ್ಲಿ ದೂರುದಾರನು ಆರೋಪಿಗೆ ಯಾವ ದಿನಾಂಕದಂದು 6 ಲಕ್ಷ ರೂಪಾಯಿಗಳ ಸಾಲವನ್ನು ನೀಡಲಾಗಿದೆ ಎಂಬುದನ್ನು ನಮೂದಿಸಿರುವುದಿಲ್ಲ. ಪಾಟೀಸವಾಲಿನ ಕಾಲದಲ್ಲಿ, ದೂರುದಾರನು ನವೆಂಬರ್, 2011 ಎಂದು ದಿನಾಂಕವನ್ನು ನೀಡಿರುತ್ತಾನೆ. ಪ್ರತಿಯೊಂದು ವರ್ಗಾವಣೀಯ ಲಿಖಿತವನ್ನು ಅಂಥ ದಿನಾಂಕದಂದು ಮಾಡಿದ ಮತ್ತು ಪಡೆದ ದಿನಾಂಕಕ್ಕೆ ಮಾಡಲಾಗಿದೆ ಎಂದು 118(ಬಿ) ಪ್ರಕರಣದ ಅಡಿಯಲ್ಲಿ ಪೂರ್ವಭಾವನೆ ಮಾಡತಕ್ಕದ್ದು. ಒಪ್ಪಿಕೊಂಡಂತೆ, ಚೆಕ್‌ನ ದಿನಾಂಕ 27.02.2012 ಆಗಿದೆ. ದೂರುದಾರನಿಗೆ ಆರೋಪಿಯು ನವೆಂಬರ್ 2011ರ ಮುಂದಿನ ದಿನಾಂಕದ ಅಂದರೆ 27.2.2012 ಹಾಕಲಾದ ಚೆಕ್‌ಅನ್ನು ನೀಡಿರುತ್ತಾನೆ. ದೂರುದಾರನು ಚೆಕ್‌ನಲ್ಲಿ ಮುಂದಿನ ದಿನಾಂಕವಾಗಿ 27.2.2012ಅನ್ನು ನಮೂದಿಸಿ ಎಂಬ ಇಂಗಿತವನ್ನು

ಆರೋಪಿಗೆ ನೀಡಿರುವುದಿಲ್ಲ. ದಿನಾಂಕ: 27.2.2012ರಂದು ನೀಡಲಾದ ಚೆಕ್‌ಅನ್ನು ದಿನಾಂಕ: 1.3.2012ರಂದು ನಗದೀಕರಣಕ್ಕೆ ಹಾಕಲಾಗಿದೆ. ಅದು ಸುಸಂಗತವಾಗಿಲ್ಲವೆಂದು ದೂರುದಾರನು ಅದರಲ್ಲೂ ದೂರಿನ 1ನೇ ಕಂಡಿಕೆಯಲ್ಲಿ ನಿವೇದಿಸಿದ ಅಂಶವನ್ನು ನಾವು ಓದಿದಾಗ ಚೆಕ್ ಸುಸಂಗತವಾಗಿಲ್ಲದಿರುವುದು ತಿಳಿದುಬರುತ್ತದೆ. 1ನೇ ಕಂಡಿಕೆಯ ಉದ್ಧೃತ ಭಾಗವು ಹೀಗಿದೆ:

> "1. *ಆರೋಪಿಯು ದೂರುದಾರನಿಗೆ ಒಬ್ಬ ಒಳ್ಳೆಯ ಸ್ನೇಹಿತನಾಗಿರುತ್ತಾನೆ. ಆರೋಪಿಯ ಕೋರಿಕೆಯ ಮೇಲೆ, ದೂರುದಾರನು ಆರೋಪಿಯ ಒಳ್ಳೆಯ ಸ್ನೇಹಿತನಾದ ಕಾರಣ ಅವನ ಕುಟುಂಬದ ಅಗತ್ಯತೆಗಳಿಗಾಗಿ 6,00,000/- (ಆರು ಲಕ್ಷ ರೂಪಾಯಿಗಳು) ರೂ.ಗಳನ್ನು ಸ್ನೇಹಿತನೆಂಬ ವಿಶ್ವಾಸದಿಂದ ಆರೋಪಿಯ ಹಣಕಾಸಿನ ಸಂಕಷ್ಟವನ್ನು ಭರಿಸುವುದಕ್ಕಾಗಿ ಅವನಿಗೆ ಕೈಗಡವನ್ನು ನೀಡಲು ದೂರುದಾರನು ಒಪ್ಪಿಕೊಂಡು, ಅದರಂತೆ ದೂರುದಾರನು ಆರೋಪಿಗೆ ಕೈಗಡವಾಗಿ 6,00,000/- ರೂ.ಗಳ (ಆರು ಲಕ್ಷ ರೂಪಾಯಿಗಳ) ದಿನಾಂಕ: 27.2.2012ರ ಚೆಕ್‌ಅನ್ನು, ಅದನ್ನು ಬ್ಯಾಂಕಿಗೆ ನೀಡಿದಾಗ ಅದು ಸ್ವೀಕೃತವಾಗುತ್ತದೆ ಎಂದು ಹೇಳಿ ನೀಡಿರುತ್ತಾನೆ. ಆದರೆ, ದೂರುದಾರನು ತನಗೆ ನೀಡಿದ ಚೆಕ್‌ಅನ್ನು ದಿನಾಂಕ: 01.03.2012ರಂದು ಬ್ಯಾಂಕಿಗೆ ನಗದೀಕರಣಕ್ಕಾಗಿ ಸಲ್ಲಿಸಿದಾಗ, ಬ್ಯಾಂಕಿನಿಂದ "ನಿಧಿಯ ಕೊರತೆ" ಎಂಬ ಹಿಂಬರಹದೊಂದಿಗೆ ದೂರುದಾರನಿಗೆ ಆಶ್ಚರ್ಯವಾಗುವಂತೆ ಚೆಕ್ ಆತನ ಕೈಸೇರಿರುತ್ತದೆ ಎಂದು ದೂರಿನಲ್ಲಿ ದೂರುದಾರನು ಸವಿವರವಾಗಿ ನಿವೇದಿಸಿಕೊಂಡಿರುವನು".*

27. ಆದ್ದರಿಂದ, ದೂರಿನಲ್ಲಿ ದೂರುದಾರನು ಹೇಳಿರುವ ಪ್ರಾರಂಭಿಕ ಹೇಳಿಕೆಯು ಹಾಗೂ ಒಂದೆಡೆ ಸಾಲವನ್ನು ನೀಡಲಾಗಿರುವ ಮತ್ತು ಇನ್ನೊಂದೆಡೆ ಪಾಟಿ-ಸವಾಲಿನಲ್ಲಿ ಹೇಳಲಾಗಿರುವ ದಿನಾಂಕಕ್ಕೆ

ಸಂಬಂಧಿಸಿದಂತೆ ತನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಹೇಳಿಕೆಯು ತದ್ವಿರುದ್ಧವಾಗಿದ್ದು, ಅದನ್ನು ತೃಪ್ತಿಕರವಾಗಿ ವಿವರಿಸಿರುವುದಿಲ್ಲ. ಉಚ್ಚ ನ್ಯಾಯಾಲಯವು, ಆರೋಪಿಯು ಚೆಕ್‌ನ ಜಾರಿಯನ್ನು ಅಥವಾ ಕಾನೂನು ಹೊಣೆಗಾರಿಕೆಯನ್ನು ಅಲ್ಲಗಳೆದು ನೋಟೀಸಿಗೆ ಉತ್ತರವನ್ನು ನೀಡಿರುವುದಿಲ್ಲ ಎಂಬ ಸಂಗತಿಯಿಂದ ಅನುಚಿತವಾಗಿ ಪ್ರಭಾವಕ್ಕೆ ಒಳಗಾಗಿದೆ. ಅಧಿವಿಚಾರಣಾ ನ್ಯಾಯಾಲಯದ ಮುಂದೆಯೂ ಸಹ, ಅಪೀಲುದಾರ–ಆರೋಪಿಯು ಚೆಕ್‌ನಲ್ಲಿ ಅವನು ಮಾಡಿರುವ ಸಹಿಯನ್ನು ನಿರಾಕರಿಸಿರುವುದಿಲ್ಲ.

28. ಆರೋಪಿಗೆ ನೀಡಲಾದ 6 ಲಕ್ಷ ರೂ.ಗಳ ಸಾಲವಷ್ಟೇ ಅಲ್ಲದೆ, ಎರಡು ವರ್ಷದೊಳಗಾಗಿ ದೂರುದಾರನು 18 ಲಕ್ಷ ರೂ.ಗಳ ಮೊತ್ತವನ್ನು ಆರೋಪಿಗೆ ನೀಡಿರುವುದನ್ನು ಸೂಚಿಸಲು ನ್ಯಾಯಾಲಯದ ಮುಂದೆ ಸಾಕ್ಷ್ಯವನ್ನು ಮಂಡಿಸಿದಾಗ ಮತ್ತು ಅವನ ಹಣಕಾಸಿನ ಸಾಮರ್ಥ್ಯವನ್ನು ಪ್ರಶ್ನಿಸಿದಾಗ, ತನ್ನ ಹಣಕಾಸಿನ ಸಾಮರ್ಥ್ಯವನ್ನು ದೂರುದಾರನೇ ವಿವರಿಸಬೇಕಾದುದು ಅನಿವಾರ್ಯವಾಗಿತ್ತು ಎಂಬುದು ನಮ್ಮ ಅಭಿಪ್ರಾಯವಾಗಿದೆ. ನ್ಯಾಯಾಲಯವು ನಕಾರಾತ್ಮಕ ಸಾಕ್ಷ್ಯವನ್ನು ಒದಗಿಸುವುದಕ್ಕೆ ವ್ಯಕ್ತಿಯನ್ನು ಒತ್ತಾಯಪಡಿಸುವುದಿಲ್ಲ. ದೂರುದಾರನು ಹಣವನ್ನು ಸಾಲವಾಗಿ ನೀಡುವ ತನ್ನ ಹಣಕಾಸು ಸಾಮರ್ಥ್ಯವನ್ನು ರುಜುವಾತುಪಡಿಸುವುದಕ್ಕೆ ವಿಫಲನಾಗಿರುವನೆಂದು ಅಧಿವಿಚಾರಣಾ ನ್ಯಾಯಾಲಯವು ನಿರ್ಣಯಿಸಿರುವುದನ್ನು ವ್ಯತಿರಿಕ್ತಗೊಳಿಸಿರುವ ಉಚ್ಚ ನ್ಯಾಯಾಲಯದ ಅಭಿಪ್ರಾಯವನ್ನು ಸಮರ್ಥಿಸಲಾಗುವುದಿಲ್ಲ. ಪ್ರತಿವಾದಿಯ ಪರವಾಗಿ ಮಂಡಿಸಿರುವ ಸಾಕ್ಷ್ಯದ ಪರಿಗಣನೆಯ ಆಧಾರದ ಮೇಲೆ ಅಧಿವಿಚಾರಣಾ ನ್ಯಾಯಾಲಯದ ನಿರ್ಣಯವು ವ್ಯತಿರಿಕ್ತವಾಗಿದೆ ಎಂಬ ಉಚ್ಚ ನ್ಯಾಯಾಲಯದ ಅಭಿಪ್ರಾಯೋಕ್ತಿಯನ್ನು, ಅಧಿವಿಚಾರಣಾ ನ್ಯಾಯಾಲಯದ ನಿರ್ಣಯವನ್ನು ವ್ಯತಿರಿಕ್ತಗೊಳಿಸಿದಾಗ, ಉಚ್ಚ ನ್ಯಾಯಾಲಯವು ವ್ಯತಿರಿಕ್ತಗೊಳಿಸಿದಂತೆ ಅದನ್ನು ಹೇಗೆ ಪರಿಭಾಷಿಸಲಾಗಿದೆ ಎಂಬುದನ್ನು ಕಂಡುಕೊಳ್ಳುವಲ್ಲಿ ನಾವು ವಿಫಲರಾಗಿದ್ದೇವೆ. **ಗಾಮಿನಿ ಬಾಲಕೋಟೇಶ್ವರ ರಾವ್ ಮತ್ತು ಇತರರು –ವಿರುದ್ಧ– ಕಾರ್ಯದರ್ಶಿಯ ಮೂಲಕ ಆಂಧ್ರಪ್ರದೇಶ ರಾಜ್ಯ**

**(2009) 10 ಎಸ್‌ಸಿಸಿ 636** ಮೊಕದ್ದಮೆಯಲ್ಲಿ, "ವ್ಯತಿರಿಕ್ತ" ಎಂಬ ಅಭಿವ್ಯಕ್ತಿಯನ್ನು ಪರಿಗಣಿಸುವ ಸಂದರ್ಭ ಈ ನ್ಯಾಯಾಲಯಕ್ಕೆ ಒದಗಿ ಬಂದಿತ್ತು; ಅಧಿವಿಚಾರಣಾ ನ್ಯಾಯಾಲಯವು ತೆಗೆದುಕೊಂಡ ಸಾಕ್ಷ್ಯ ಮತ್ತು ನಿರ್ಣಯಗಳನ್ನು ಉಚ್ಚ ನ್ಯಾಯಾಲಯವು ಪುನರ್‌ಪರಿಶೀಲಿಸಬಹುದಾದರೂ, ತೀರ್ಪು ಸಾಕ್ಷ್ಯದ ಮಹತ್ವಕ್ಕೆ ವಿರುದ್ಧವಾಗಿದೆ ಇದ್ದಾಗ ಮಾತ್ರ ಖುಲಾಸೆಯ ತೀರ್ಪನಲ್ಲಿ ಹಸ್ತಕ್ಷೇಪ ಮಾಡಬಹುದಾಗಿದೆ ಎಂದು ಈ ನ್ಯಾಯಾಲಯವು ನಿರ್ಣಯಿಸಿದೆ. 14ನೇ ಕಂಡಿಕೆಯಲ್ಲಿ ನೀಡಲಾದ ನಿರ್ಣಯವು ಹೀಗಿದೆ:

"14. ಮಂಡಿಸಿರುವ ವಾದಗಳನ್ನು ನಾವು *ಪರಿಗಣಿಸಿದ್ದೇವೆ ಮತ್ತು ವಸ್ತುವಿಷಯವನ್ನು ಸುದೀರ್ಘವಾಗಿ ಆಲಿಸಿದ್ದೇವೆ. ಇಲ್ಲಿ, ಶ್ರೀ ರಾವ್ ಅವರು ವಾದಿಸಿರುವಂತೆ, ಅಧಿವಿಚಾರಣಾ ನ್ಯಾಯಾಲಯವು ವಿರಳವೆಂದು ಮತ್ತು ಅಸಾಧಾರಣ ಸಂದರ್ಭಗಳೆಂದು ದಾಖಲಿಸಿದ ಖುಲಾಸೆಯ ವಿರುದ್ಧದ ಅಪೀಲಿನಲ್ಲಿ ಹಸ್ತಕ್ಷೇಪವಾಗಿದೆಯೆಂಬ ಸಂಗತಿಯು ಸತ್ಯವಾದುದಾಗಿದೆ. ಆದಾಗ್ಯೂ, ಅಧಿವಿಚಾರಣಾ ನ್ಯಾಯಾಲಯದ ತೀರ್ಪು ವ್ಯತಿರಿಕ್ತವಾಗಿದೆ ಎಂದು ಕಂಡುಬಂದ ಸಂದರ್ಭದಲ್ಲಿ ಮಾತ್ರವೇ ಅಧಿವಿಚಾರಣಾ ನ್ಯಾಯಾಲಯವು ಪಡೆದುಕೊಂಡ ಸಾಕ್ಷ್ಯಗಳನ್ನು ಮತ್ತು ನಿರ್ಣಯಗಳನ್ನು ಮರು–ಪರಿಶೀನೆ ಮಾಡುವುದಕ್ಕೆ ಉಚ್ಚ ನ್ಯಾಯಾಲಯವು ಮುಕ್ತವಾಗಿರುತ್ತದೆ ಎಂಬುದು ಈಗಾಗಲೇ ಸುಸ್ಥಾಪಿತವಾದ ಅಂಶವಾಗಿದೆ. 'ವ್ಯತಿರಿಕ್ತತೆ' ಎಂಬ ಪದವನ್ನು ಕಾನೂನಿನಲ್ಲಿ ಅರ್ಥೈಸಿಕೊಳ್ಳುವ ಪರಿಭಾಷೆಯಲ್ಲಿ ಹೇಳುವುದಾದರೆ, "ಸಾಕ್ಷ್ಯದ ಮಹತ್ವದ ವಿರುದ್ಧ" ಎಂಬ ಅರ್ಥದಲ್ಲಿ ಅರ್ಥೈಸಬಹುದಾಗಿದೆ. ತದನುಸಾರವಾಗಿ, ಈಗ ನಾವು ಉಚ್ಚ ನ್ಯಾಯಾಲಯವು ಹೇಳಿರುವ ಸಂಗತಿಯನುಸಾರ ಅಧಿವಿಚಾರಣಾ ನ್ಯಾಯಾಲಯವು ನೀಡಿರುವ ತೀರ್ಪು "ವ್ಯತಿರಿಕ್ತತೆ"ಯಿಂದ ಕೂಡಿರುವುದು ಕಂಡಬರುತ್ತದೆಯೇ ಎಂಬುದನ್ನು ಕಂಡುಕೊಳ್ಳಬೇಕಾಗಿದೆ................"*

29. ಪ್ರತಿವಾದಿಯು ಮಂಡಿಸಿದ್ದ ಸಾಕ್ಷ್ಯಗಳನ್ನು ಉಚ್ಚ ನ್ಯಾಯಾಲಯವು ಅಲಕ್ಷಿಸದೆ, ದೂರುದಾರನ ಹಣಕಾಸು ಸಾಮರ್ಥ್ಯಕ್ಕೆ ಸಂಬಂಧಿಸಿದಂತೆ ಅಧಿವಿಚಾರಣಾ ನ್ಯಾಯಾಲಯದ ನಿರ್ಣಯವು "ವ್ಯತಿರಿಕ್ತತೆ"ಯಿಂದ ಕೂಡಿದೆ ಎಂದು ನಿರ್ಣಯಿಸಲಾಗುವುದಿಲ್ಲ, ಹಾಗಾಗಿ, ಆರೋಪಿಯು ಸಂಭವನೀಯ ಪ್ರತಿವಾದವನ್ನು ಎತ್ತಿದ್ದಾನೆ ಮತ್ತು ದೂರುದಾರನು ತನ್ನ ಹಣಕಾಸು ಸಾಮರ್ಥ್ಯವನ್ನು ರುಜುವಾತುಪಡಿಸಲು ವಿಫಲನಾಗಿದ್ದಾನೆ ಎಂದು ಅಧಿವಿಚಾರಣಾ ನ್ಯಾಯಾಲಯದ ನಿರ್ಣಯವು, ಪ್ರತಿವಾದಿಯು ಮಂಡಿಸಿದ ಸಾಕ್ಷ್ಯವನ್ನಾಧರಿಸಿದೆ ಎಂಬುದು ನಮಗೆ ಮನವರಿಕೆಯಾಗಿದೆ. ಅಧಿವಿಚಾರಣಾ ನ್ಯಾಯಾಲಯದ ನಿರ್ಣಯಗಳು ವ್ಯತಿರಿಕ್ತವಾಗಿವೆ ಎಂಬ ಉಚ್ಚ ನ್ಯಾಯಾಲಯದ ಅಭಿಪ್ರಾಯಗಳು ಸಮರ್ಥನೀಯವಾಗಿಲ್ಲ. ಹಾಗಾಗಿ, ನಾವು ಉಚ್ಚ ನ್ಯಾಯಾಲಯದ ತೀರ್ಪು ಸಮರ್ಥನೀಯವಾಗಿಲ್ಲವೆಂಬುದು ನಮ್ಮ ಅಭಿಪ್ರಾಯವಾಗಿದೆ.

30. ತತ್ಪರಿಣಾಮವಾಗಿ, ಅಪೀಲನ್ನು ಪುರಸ್ಕರಿಸಲಾಗಿದೆ ಮತ್ತು ಉಚ್ಚ ನ್ಯಾಯಾಲಯದ ತೀರ್ಪನ್ನು ವಜಾಗೊಳಿಸಲಾಗಿದೆ ಹಾಗೂ ಅಧಿವಿಚಾರಣಾ ನ್ಯಾಯಾಲಯದ ತೀರ್ಪನ್ನು ಪುನಃಸ್ಥಾಪಿಸಲಾಗಿದೆ.

……………………

**ಅಶೋಕ್ ಭೂಷಣ್**

……………………

**ಕೆ.ಎಂ. ಜೋಸೆಫ್.**

**ನವ ದೆಹಲಿ,**

**9ನೇ ಏಪ್ರಿಲ್, 2019**

## ಕ್ಲೇಮು ನಿರಾಕರಣೆ

**"**ಪ್ರಾದೇಶಿಕ ಭಾಷೆಗಳಲ್ಲಿ ಭಾಷಾಂತರಿಸಲಾದ ತೀರ್ಪುಗಳನ್ನು ಕಕ್ಷಿದಾರರ ಆಕೆಯ/ಆತನ ಸ್ಥಳೀಯ ಭಾಷೆಯಲ್ಲಿ ಅರ್ಥ ಮಾಡಿಕೊಳ್ಳುವ ಉದ್ದೇಶಕ್ಕಾಗಿ ಮಾತ್ರ ಸೀಮಿತಗೊಳಿಸಲಾಗಿದೆ ಮತ್ತು ಇತರೆ ಯಾವುದೇ ಉದ್ದೇಶಕ್ಕೆ ಅವುಗಳನ್ನು ಬಳಸಿಕೊಳ್ಳುವಂತಿಲ್ಲ. ಎಲ್ಲ ಅಧಿಕೃತ ಹಾಗೂ ಕಚೇರಿ ಉದ್ದೇಶಗಳಿಗಾಗಿ, ಹಾಗೂ ಜಾರಿಗೊಳಿಸುವ ಮತ್ತು ಅನುಷ್ಠಾನಗೊಳಿಸುವುದಕ್ಕಾಗಿ**"** ತೀರ್ಪುಗಳ ಆಂಗ್ಲ ಭಾಷೆಯ ಆವೃತ್ತಿಯು ಅಧಿಕೃತವಾಗಿರತಕ್ಕದ್ದು.**"**